(ಸರ್ವೋಚ್ಚ ನ್ಯಾಯಾಲಯ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಆರ್. ಭಾನುಮತಿ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎಸ್. ಬೋಪಣ್ಣ

ಮಲ್ಲಿಕಾರ್ಜುನ್ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ

ಕ್ರಿಮಿನಲ್ ಅಪೀಲುಸಂಖ್ಯೆ: 1066/2009, ದಿನಾಂಕ 8 ನೇ ಆಗಸ್ಟ್, 20

ತೀರ್ಪು

ನ್ಯಾಯಮೂರ್ತಿ ಆರ್. ಭಾನುಮತಿ:

ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಮೇರೆಗೆ 1 ನೇ, 2 ನೇ ಮತ್ತು 4 ನೇ ಅಪೀಲುದಾರರ-ಆರೋಪಿಗಳ ಅಪರಾಧ ನಿರ್ಣಯವನ್ನು ಉಚ್ಚ ನ್ಯಾಯಾಲಯವು ಚ ಮಲ್ಲಿಕಾರ್ಜುನ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ದೃಢೀಕರಿಸುವಲ್ಲಿ ಮತ್ತು ದೃಢೀಕರಿಸುವ ಮೂಲಕ ಕ್ರಿಮಿನಲ್ ಅಪೀಲುಸಂಖ್ಯೆ: 124/2005 ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ಹೊರಡಿಸಿದ ದಿ:30.05.2008 ರ ತೀರ್ಪಿನಿಂದ ಹಾಗೂ ಅವರಲ್ಲಿ ಪ್ರತಿಯೊಬ್ಬರ ಮೇಲೆ ವಿಧಿಸಿದ ಜೀವಾವಧಿ ಶಿಕ್ಷೆಯಿಂದ ಈ ಅಪೀಲು ಉದ್ಭವಿಸಿದೆ.ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ ಭಾರತ ದಂಡ ಸಂಹಿತೆಯ 448 ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯವು ಅವರ ಅಪರಾಧ ನಿರ್ಣಯವನ್ನು ಹಾಗೂ ಚ ಅವರಲ್ಲಿ ಪ್ರತಿಯೊಬ್ಬರ ಮೇಲೆ ವಿಧಿಸಿದ ಸೆರೆವಾಸದ ಶಿಕ್ಷೆಯನ್ನು ಸಹ ದೃಢೀಕರಿಸಿದೆ.

2. ಅಪೀಲುದಾರ-ಆರೋಪಿಸಂಖ್ಯೆ: 1-ಮಲ್ಲಿಕಾರ್ಜುನ, ಆರೋಪಿಸಂಖ್ಯೆ: 2-ರವಿ ಮತ್ತು ಸಹ-ಆರೋಪಿಸಂಖ್ಯೆ: 3-ಮಾರುತಿ (ತಲೆಮರೆಸಿಕೊಂಡಿದ್ದಾನೆ) ಇವರು, ಆರೋಪಿಸಂಖ್ಯೆ: 4-ಬಾಳಪ್ಪ ಈತನ ಮಕ್ಕಳಾಗಿದ್ದಾರೆ.ಮೃತ ಭೀಮರಾಯನು ಆರೋಪಿಸಂಖ್ಯೆ: 4-ಬಾಳಪ್ಪ ಈತನ ಪತ್ನಿ ಭೀಮವ್ವಳೊಂದಿಗೆ ಘಟನೆ ನಡೆಯುವ ಮುಂಚೆ 4-5 ವರ್ಷಗಳಿಂದ ಅಕ್ರಮ ಸಂಬಂಧ ಹೊಂದಿದ್ದನೆಂದು ಆರೋಪಿಸಲಾಗಿದ್ದು, ಅದರಿಂದಾಗಿ, ಎಲ್ಲಾ ಆರೋಪಿಗಳು ಮೃತ ಭೀಮರಾಯನೊಂದಿಗೆ ವೈರತ್ವ ಹೊಂದಿದ್ದರೆಂದು ಹೇಳಲಾಗಿದೆ.ಪ್ರಾಸಾ- 5-ಕಮಲಮ್ಮ ಮೃತನ ತಾಯಿಯಾಗಿದ್ದಾಳೆ.ಪ್ರಾಸಿಕ್ಯೂಷನ್ ಮೊಕದ್ದಮೆ ಹೀಗಿದೆ-ದಿನಾಂಕ:14.06.2002 ರಂದು, ಪ್ರಸಾ- 6-ಮರೆಪ್ಪ-ಮೃತನ ತಂದೆ ಮದುವೆ ಸಮಾರಂಭಕ್ಕೆಂದು ಕೌಲೂರು ಗ್ರಾಮಕ್ಕೆ ಹೋಗಿದ್ದನು; ಪ್ರಾಸಾ- 7 ಹನಮಂತ-ಮೃತನ ಸಹೋದರ ನಸುಕಿನಲ್ಲೇ ಬೇಸಾಯಕ್ಕೆಂದು ಹೊಲಕ್ಕೆ ಹೋಗಿದ್ದನು; ಬೆಳಿಗ್ಗೆ ಸುಮಾರು 9.00 ಗಂಟೆಗೆ, ಮೃತ-ಭೀಮರಾಯನು ಬಹಿರ್ದೆಸೆಗೆಂದು ಹೊರಗೆ ಹೋಗಿದ್ದನು.ಆತನು ತನ್ನ ಮನೆಗೆ ಹಿಂತಿರುಗುತ್ತಿರುವಾಗ, ಆರೋಪಿಸಂಖ್ಯೆ: 1-ಮಲ್ಲಿಕಾರ್ಜುನ, ಆರೋಪಿಸಂಖ್ಯೆ: 2-ರವಿ ಮತ್ತು ಆರೋಪಿಸಂಖ್ಯೆ: 4-ಬಾಳಪ್ಪ (ಇದರಲ್ಲಿನ ಅಪೀಲುದಾರ) ಇವರು ಆರೋಪಿಸಂಖ್ಯೆ: 3 ಮಾರುತಿಯೊಂದಿಗೆ (ತಲೆಮರೆಸಿಕೊಂಡಿದ್ದಾನೆ) ಕೈಯಲ್ಲಿ ಆಯುಧಗಳನ್ನು ಹಿಡಿದುಕೊಂಡು ಬಂದರು; ಎಲ್ಲಾ ನಾಲ್ವರು ಆರೋಪಿಗಳು, ಆರೋಪಿಸಂಖ್ಯೆ: 4 ಈತನ ಪತ್ನಿ ಮತ್ತು ಆರೋಪಿಸಂಖ್ಯೆ: 1 ರಿಂದ 3 ಇವರ ತಾಯಿಯೊಂದಿಗೆ ಅಕ್ರಮ ಸಂಬಂಧವನ್ನು ಮೃತನು ಮುಂದುವರಿಸಿರುವುದರಿಂದ ಆತನನ್ನು ಮುಗಿಸುವುದಾಗಿ ಹೇಳಿ ಅವರು ಆತನನ್ನು ಬೆಂಬತ್ತಿ ಹೋಗುವಾಗ ಆತನನ್ನು ಹೆದರಿಸಿದ್ದಾರೆ.ಮೃತ-ಭೀಮರಾಯನು ತನ್ನ ಮನೆಗೆ ಓಡಿಬಂದು, ಸೀದಾ ಅಡುಗೆ ಮನೆಗೆ ಹೋಗಿ ಬಾಗಿಲನ್ನು ಹಾಕಿಕೊಂಡಿದ್ದಾನೆ.ಕಮಲಮ್ಮ (ಪ್ರಾಸಾ -5) ಮೃತನ ತಾಯಿಯು, ತನ್ನ ಮಗನನ್ನು ಕೊಲ್ಲದಿರಲು ಆರೋಪಿಗಳ ಮನವೊಲಿಸಲು ಪ್ರಯತ್ನಿಸಿದ್ದಾಳೆ; ಪ್ರಾಸಾ- 7-ಹನಮಂತ ಹೊಲದಿಂದ ಬಂದಿದ್ದನಾದರೂ, ಆರೋಪಿಗಳ ಕೈಯಲ್ಲಿ ಆಯುಧಗಳನ್ನು ನೋಡಿ, ಆತನು ಮನೆಯ ಒಳಗೆ ಹೋಗಲಿಲ್ಲ; ಆದರೆ ಆತನು ಘಟನೆಯನ್ನು ನೋಡಿದ್ದಾನೆ.ಎಲ್ಲ ನಾಲ್ವರು ಆರೋಪಿಗಳು ಅಡುಗೆ ಮನೆಯ ಬಾಗಿಲನ್ನು ತಳ್ಳಲು ಪ್ರಾರಂಭಿಸಿದ್ದಾರೆ, ನಂತರ ಮೃತನು ಅಡುಗೆ ಮನೆಯಿಂದ ಹೊರಬಂದಿದ್ದಾನೆ; ಆರೋಪಿಸಂಖ್ಯೆ: 4-ಬಾಳಪ್ಪನು, ತನ್ನ ಪತ್ನಿಯೊಡನೆ 4-5 ವರ್ಷಗಳಿಂದ ಆತನು ಅಕ್ರಮ ಸಂಬಂಧ

ಹೊಂದಿರುವನೆಂದು ಮತ್ತು ಇಬ್ಬರೂ ಸೇರಿ ತಮ್ಮ ಕುಟುಂಬದ ಪ್ರತಿಷ್ಠೆಯನ್ನು ಹಾಳುಗೆಡುವುತ್ತಿರುವುದರಿಂದ ಆತನನ್ನು ಜೀವಸಹಿತ ಬಿಡಬಾರದೆಂದು ಹೇಳಿ ಮೃತನನ್ನು ಕೊಲ್ಲಲು ಇತರ ಆರೋಪಿಗಳನ್ನು ಪ್ರಚೋದಿಸಿದ್ದಾನೆ; ಆರೋಪಿಸಂಖ್ಯೆ: 1-ಮಲ್ಲಿಕಾರ್ಜುನನು, ಕತ್ತಿ-ಮುದ್ದೆಮಾಲು -2 ರಿಂದ ಮೃತನ ಸೊಂಟದ ಎಡ ಭಾಗದ ಮೇಲೆ ಗಾಯವನ್ನುಂಟು ಮಾಡಿದನು; ಆರೋಪಿಸಂಖ್ಯೆ: 2-ರವಿ ಈತನು ಮೃತನ ಮೂಗು ಮತ್ತು ಎಡ ಕಣ್ಣಿನ ಹುಬ್ಬಿನ ಮೇಲೆ ಕತ್ತಿ ಮುದ್ದೆಮಾಲು -2 ರಿಂದ ಹಲ್ಲೆ ಮಾಡಿದನು; ಆರೋಪಿಸಂಖ್ಯೆ: 1 ಈತನು ಪುನಃ ಮೃತನ ಎದೆಯ, ಎಡ ಹುಬ್ಬಿನ ಮತ್ತು ಬಲ ತೊಡೆಯ ಮೇಲೆ ಮುದ್ದೆ ಮಾಲು 1-ಕತ್ತಿಯಿಂದ ಗಾಯಗಳನ್ನುಂಟು ಮಾಡಿದನು; ಆ ತರುವಾಯ, ಆರೋಪಿಸಂಖ್ಯೆ: 3-ಮಾರುತಿಯು ಮೃತನನ್ನು ಎಳೆದು ಆತನನ್ನು ನೆಲಕ್ಕೆ ಬೀಳಿಸಿದನು; ಆರೋಪಿಸಂಖ್ಯೆ: 4-ಬಾಳಪ್ಪನು ಕೊಡಲಿಯ ಹಿಡಿಯಿಂದ (ಮುದ್ದೆಮಾಲು -3) ಮೃತನ ಬೆನ್ನಿನ ಮೇಲೆ ಹಲ್ಲೆ ಮಾಡಿದನು.ಆರೋಪಿಸಂಖ್ಯೆ: 2-ರವಿಯು ಮೃತನ ತಲೆಯನ್ನು ಹಿಡಿದುಕೊಂಡರೆ, ಆರೋಪಿಸಂಖ್ಯೆ: 3 ಮತ್ತು 4 ಇವರು ಆತನ ಎರಡು ಕಾಲುಗಳನ್ನು ಹಿಡಿದುಕೊಂಡರು ಹಾಗೂ ಆರೋಪಿಸಂಖ್ಯೆ: 1 ಈತನು ಮುದ್ದೆ ಮಾಲು- 1-ಕತ್ತಿಯಿಂದ ಮೃತನ ಕುತ್ತಿಗೆಯನ್ನು ಕತ್ತರಿಸಿದನು. ಪ್ರಾಸಾ- 5-ಮೃತನ ತಾಯಿಯು ಸಹಾಯಕ್ಕಾಗಿ ಕೂಗುತ್ತ ಗಲಾಟೆ ಎಬ್ಬಿಸಿದಳು; ಪ್ರಾಸಾ 1 ರಿಂದ 4 ಮತ್ತು ಪ್ರಸಾ -7 ಮತ್ತು ಇತರರು ಸ್ಥಳಕ್ಕೆ ಧಾವಿಸಿ ಬಂದರು ಮತ್ತು ಅವರನ್ನು ನೋಡಿ, ಎಲ್ಲಾ ಆರೋಪಿಗಳು ಅವರ ಒಂದು ಕತ್ತಿಯನ್ನು (ಮುದ್ದೆಮಾಲು -2) ಮತ್ತು ಕೊಡಲಿಯ ಹಿಡಿಯನ್ನು (ಮುದ್ದೆ ಮಾಲು -3) ಸ್ಥಳದಲ್ಲಿಯೇ ಬಿಟ್ಟು ಓಡಿ ಹೋದರು.

3. ಅದೇ ದಿನ ಮಧ್ಯಾಹ್ನ 01.15 ಕ್ಕೆ, ಪ್ರಸಾ- 5-ಕಮಲಮ್ಮ, ಮೃತನ ತಾಯಿ, ಸೈದಾಪುರ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದು, ಅದನ್ನು ಪ್ರಾಸಾ-17-ಪಿಎಸ್ಐ, ಎಸ್.ವೈ, ಹುಣಸಿಕಟ್ಟಿಯವರು ಬರೆದಿದ್ದಾರೆ; ಅದರ ಆಧಾರದ ಮೇಲೆ, ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ ಭಾರತ ದಂಡ ಸಂಹಿತೆಯ 448 ನೇ, 504 ನೇ ಮತ್ತು 302 ನೇ ಪ್ರಕರಣಗಳ ಅಡಿಯಲ್ಲಿ ಸೈದಾಪುರ ಪೊಲೀಸ್ ಠಾಣೆಯಲ್ಲಿ ಅಪರಾಧಸಂಖ್ಯೆ: 44/2002 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲಾಗಿದೆ.ಪ್ರಾಸಾ-17-ಪಿಎಸ್ಐ ಘಟನೆ ನಡೆದ ಸ್ಥಳಕ್ಕೆ ತೆರಳಿ ಪಂಚನಾಮೆಯನ್ನು (ನಿಶಾನೆ-ಪಿ) ಮತ್ತು ಪ್ರಾರಂಭಿಕ ತನಿಖೆಯನ್ನು, ಎಂದರೆ, ಪ್ರಸಾ- 8-ಚಂದ್ರಪ್ಪ ಮತ್ತು ಪ್ರಸಾ- 9-ಮಹಾದೇವಪ್ಪ ನೀಡಗೇರ ಇವರ ಎದುರಿನಲ್ಲಿ ಸ್ಥಳ ಪಂಚನಾಮೆಯನ್ನು (ನಿಶಾನೆ-ಪಿ 7) ಸಿದ್ಧಪಡಿಸಿದ್ದಾರೆ.ರಕ್ತದ ಕಲೆ ಮೆತ್ತಿದ ಕತ್ತಿ (ಎಮ್ಓ -10) ಮತ್ತು ಮಾದರಿ ಮಣ್ಣು (ಎಮ್ -11) ಇವುಗಳನ್ನು ಘಟನೆ ನಡೆದ ಸ್ಥಳದಿಂದ ವಶಪಡಿಸಿಕೊಂಡಿದ್ದಾರೆ.ಪ್ರಸಾ-12-ಡಾ.ಹೆಚ್.ಆರ್. ಕುಮಾರ್ ಇವರು,ದಿನಾಂಕ: 14.06.2002 ರಂದು ಸಂಜೆ 4.15 ಕ್ಕೆ ಮೃತ ಭೀಮರಾಯನ ಮೃತ ದೇಹದ ಶವಪರೀಕ್ಷೆ ನಡೆಸಿದ್ದಾರೆ.ಪ್ರಮುಖ ಅಂಗಕ್ಕೆ ಎಂದರೆ, ಕುತ್ತಿಗೆಗೆ ಗಾಯವಾದ್ದರಿಂದ ಬಲವಾದ ಹೊಡೆತ ಮತ್ತು ರಕ್ತಸ್ರಾವದ ಕಾರಣದಿಂದ ಮರಣ ಸಂಭವಿಸಿದೆ ಎಂದು ಪ್ರಾಸಾ-12-ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.ಇದಲ್ಲದೆ, ಗಾಯವು ಚಾಕುಗಳಿಂದ ಉಂಟಾಗಿರುವ ಸಾಧ್ಯತೆ ಇದೆ ಎಂದು ಪ್ರಾಸಾ-12-ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.

4.ಸಂಖ್ಯೆ: 1 ರಿಂದ 3 ರವರೆಗಿನ ಆರೋಪಿಗಳನ್ನುದಿನಾಂಕ: 15.06.2002 ರಂದು ಸುಮಾರು ಬೆಳಿಗ್ಗೆ 11.00 ಗಂಟೆಗೆ ದಸ್ತಗಿರಿ ಮಾಡಲಾಯಿತು.ಆರೋಪಿಸಂಖ್ಯೆ: 1 ಈತನ ತಪ್ಪೊಪ್ಪಿಗೆ ಹೇಳಿಕೆಯ ಆಧಾರದ ಮೇಲೆ, ಆತನ ಮನೆಯ ಕೊಟ್ಟಿಗೆಯ ಅಟ್ಟದಲ್ಲಿ ಮೇವು ಹುಲ್ಲಿನಲ್ಲಿ ಬಚ್ಚಿಟ್ಟಿದ್ದ ಕತ್ತಿಯನ್ನು (ಎಮ್- 1) ವಶಪಡಿಸಿಕೊಳ್ಳಲಾಯಿತು.ತನಿಖೆ ಪೂರ್ಣಗೊಂಡ ನಂತರ, ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾಗುವ ಭಾರತ ದಂಡ ಸಂಹಿತೆಯ 448 ನೇ ಪ್ರಕರಣದ ಮೇರೆಗೆ ಮತ್ತು ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾಗುವ ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಮೇರೆಗೆ ಎಲ್ಲ ನಾಲ್ವರು ಆರೋಪಿಗಳ ಮೇಲೆ ಆರೋಪ ಪಟ್ಟಿಯನ್ನು ದಾಖಲಿಸಲಾಯಿತು.

5. ಅಧಿವಿಚಾರಣಾ ನ್ಯಾಯಾಲಯದ ಮುಂದೆ ಆರೋಪಿಗಳ ಅಪರಾಧವನ್ನು ಸಾಬೀತುಪಡಿಸಲು, ಪ್ರಾಸಿಕ್ಯೂಷನ್ನುವರು ಪ್ರಾಸಾ -1 ರಿಂದ 17 ರವರೆಗಿನ ವ್ಯಕ್ತಿಗಳನ್ನು ಪರೀಕ್ಷಿಸಿದರು ಮತ್ತು ಅನೇಕ ದಸ್ತಾವೇಜುಗಳನ್ನು ಹಾಗೂ ಮುದ್ದೆ ಮಾಲುಗಳನ್ನು ಸಹ ಗುರುತಿಸಿದರು.ಬಲಿಚಕ್ರ ಗ್ರಾಮದಲ್ಲಿ ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿರುವ ಆರೋಪಿಸಂಖ್ಯೆ: 4 ಈತನು ಮಂಡಿಸಿದ ಅನ್ಯತ್ರ ಉಪಸ್ಥಿತಿಯ ಪ್ರತಿವಾದವನ್ನು ಅಧಿವಿಚಾರಣಾ ನ್ಯಾಯಾಲಯವು ತಳ್ಳಿಹಾಕಿದೆ.ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಪರಿಗಣಿಸಿದ ನಂತರ, ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವಲ್ಲಿ ವಿಳಂಬವಾಗಿರುವುದು ಪ್ರಾಸಿಕ್ಯೂಷನ್ ಮೊಕದ್ದಮೆಗೆ ನಿರ್ಣಾಯಕವಾಗಿರುವುದಿಲ್ಲವೆಂದು ಅಧಿವಿಚಾರಣಾ ನ್ಯಾಯಾಲಯಕ್ಕೆ

ಕಂಡುಬಂದಿತು.ವೈದ್ಯಕೀಯ ಸಾಕ್ಷದಿಂದ ಸಮರ್ಥಿತ ಪ್ರಾಸಾ- 5-ಮೃತನ ತಾಯಿಯ ಸಾಕ್ಷ್ಯವನ್ನವಲಂಬಿಸಿ ಹಾಗೂ ಇತರ ಸಾಕ್ಷ್ಯವನ್ನು ಪರಿಗಣಿಸಿ, ಸಂದೇಹಾತೀತವಾಗಿ ಆರೋಪಿಗಳ ಅಪರಾಧವನ್ನು ಪ್ರಾಸಿಕ್ಯೂಷನ್ ಸಾಬೀತುಪಡಿಸಿರುವುದಾಗಿ ಅಧಿವಿಚಾರಣಾ ನ್ಯಾಯಾಲಯವು ನಿರ್ಣಯಿಸಿ, ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾಗುವ 448 ನೇ ಪ್ರಕರಣದ ಮೇರೆಗೆ ಆರೋಪಿಸಂಖ್ಯೆ: 1, 2 ಮತ್ತು 4 ಇವರ (ಇದರಲ್ಲಿನ ಅಪೀಲುದಾರರು) ಹಾಗೂ ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾಗುವ 448 ನೇ ಪ್ರಕರಣದ ಮೇರೆಗೆ ಆರೋಪಿಸಂಖ್ಯೆ: 3 (ತಲೆಮರೆಸಿಕೊಂಡಿದ್ದಾನೆ) ಈತನ ಅಪರಾಧವನ್ನು ನಿರ್ಣಯಿಸಿ, ಪ್ರತಿಯೊಬ್ಬರೂ ಆರು ತಿಂಗಳುಗಳ ಕಠಿಣ ಕಾರಾಗೃಹ ಶಿಕ್ಷೆಗೆ ಒಳಗಾಗಬೇಕೆಂದು ಅವರಿಗೆ ಶಿಕ್ಷೆಯನ್ನು ವಿಧಿಸಿದೆ.ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 302 ನೇ ಪ್ರಕರಣದ ಮೇರೆಗೆ ಸಹ ಅವರ ಅಪರಾಧವನ್ನು ನಿರ್ಣಯಿಸಿ, ಅವರಲ್ಲಿ ಪ್ರತಿಯೊಬ್ಬರೂ ಆಜೀವ ಕಾರಾವಾಸಕ್ಕೆ ಒಳಗಾಗಬೇಕೆಂದು ಶಿಕ್ಷೆ ವಿಧಿಸಿದೆ.ಅಪೀಲಿನಲ್ಲಿ, ಅಪೀಲುದಾರರ (ಆರೋಪಿಸಂಖ್ಯೆ: 1, 2 ಮತ್ತು 4) ಹಾಗೂ ಸಹ-ಆರೋಪಿಸಂಖ್ಯೆ: 3 ಈತನ ಅಪರಾಧವನ್ನು ಮತ್ತು ಅವರಿಗೆ ವಿಧಿಸಿದ ಕಾರಾವಾಸದ ಶಿಕ್ಷೆಯನ್ನು ಸಹ ಉಚ್ಚ ನ್ಯಾಯಾಲಯವು ಸ್ಥಿರೀಕರಿಸಿದೆ.ಚ

6. ಶ್ರೀಮತಿ ಕಿರಣ್ ಸೂರಿ, ಅಪೀಲುದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಇವರು, ಘಟನೆಯು ಬೆಳಿಗ್ಗೆ 9.00 ಗಂಟೆಗೆ ಸಂಭವಿಸಿದೆ, ಆದರೆ ಮಧ್ಯಾಹ್ನ 1.15 ಗಂಟೆಗೆ ದೂರನ್ನು ಸಲ್ಲಿಸಲಾಗಿದೆ ಹಾಗೂ ಪ್ರಥಮ ವರ್ತಮಾನ ವರದಿಯನ್ನು ರಾತ್ರಿ 8.00 ಗಂಟೆಗೆ ಮ್ಯಾಜಿಸ್ಟ್ರೇಟ್ರುವರು ಸ್ವೀಕರಿಸಿದ್ದಾರೆ ಹಾಗೂ ಮ್ಯಾಜಿಸ್ಟ್ರೇಟರು ಪ್ರಥಮ ವರ್ತಮಾನ ವರದಿಯನ್ನು ಸ್ವೀಕರಿಸುವಲ್ಲಿ ಅತಿಯಾದ ವಿಳಂಬವುಂಟಾಗಿದೆ ಮತ್ತು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವಲ್ಲಿ ಆದ ವಿಳಂಬ ಕುರಿತು ಯಾವುದೇ ವಿವರಣೆಯನ್ನು ಅದರಲ್ಲಿ ನೀಡಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವಲ್ಲಿ ಮತ್ತು ನ್ಯಾಯಾಲಯದಲ್ಲಿ ಪ್ರಥಮ ವರ್ತಮಾನ ವರದಿಯನ್ನು ಸ್ವೀಕರಿಸುವಲ್ಲಿ ಉಂಟಾದ ವಿಳಂಬ ಕುರಿತು ವಿವರಿಸದೆ ಇರುವುದು ಪ್ರಾಸಿಕ್ಯೂಷನ್ ಮೊಕದ್ದಮೆಯ ಬಗ್ಗೆ ಗಂಭೀರ ಅನುಮಾನಗಳನ್ನು ಹುಟ್ಟುಹಾಕುತ್ತದೆ ಹಾಗೂ ಆರೋಪಿಗಳ ಬಗ್ಗೆ ತಪ್ಪು ಕಲ್ಪನೆ ಉಂಟಾಗುವ ಸಂಭವವಿದೆ ಮತ್ತು ಈ ಅಂಶವನ್ನು ಅಧಿವಿಚಾರಣಾ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯ ಇವು ಸೂಕ್ತವಾಗಿ ಪರಿಗಣಿಸಿರುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ, ಪ್ರಾಸಾ- 5-ಕಮಲಮ್ಮ-ಮೃತನ ತಾಯಿಯ ಸಾಕ್ಷ್ಯವು ವ್ಯತ್ಯಾಸಗಳಿಂದ ಕೂಡಿದ್ದು, ಅದು ಪ್ರಾಸಾ-ಈಕೆಯ ವಿಶ್ವಾಸಾರ್ಹತೆಯ ಮೇಲೆ ಅತಿ ಮುಖ್ಯವಾದ ಪರಿಣಾಮ ಬೀರುತ್ತದೆ ಹಾಗೂ ಪ್ರಾಸಾ -5 ಈಕೆಯ ಸಾಕ್ಷ್ಯದಿಂದ ಅಪರಾಧಕ್ಕೆ ಆಧಾರವನ್ನು ರೂಪಿಸಲಾಗುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ಮಾನ್ಯ ಹಿರಿಯ ನ್ಯಾಯವಾದಿಗಳು, ಆರೋಪಿಸಂಖ್ಯೆ: 1 ಈತನಿಂದ ಕತ್ತಿಯನ್ನು (ಎಮ್- 1) ಆರೋಪಿತ ಮತ್ತು ಘಟನೆ ನಡೆದ ಸ್ಥಳದಿಂದ ಇತರ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿರುವುದನ್ನು ಪ್ರಶ್ನಿಸಿ, ಸಾಕ್ಷ್ಯದ ಗುಣಾರ್ಹತೆಗಳನ್ನು ಸೂಕ್ತವಾಗಿ ವಿವೇಚಿಸಿಲ್ಲವೆಂದು ಮತ್ತು ಕೆಳ ನ್ಯಾಯಾಲಯಗಳು ಅಪೀಲುದಾರರನ್ನು ಸಿದ್ಧದೋಷಿಗಳನ್ನಾಗಿಸುವಲ್ಲಿ ತಪ್ಪೆಸಗಿವೆ ಎಂದು ನಿವೇದಿಸಿಕೊಂಡಿದ್ದಾರೆ.

7. ಕರ್ನಾಟಕ ರಾಜ್ಯದ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಜೋಸೆಫ್ ಅರಿಸ್ಟೋಟಲ್ರುವರು, ಇಬ್ಬರು ಪತ್ಯಕ್ಷ-ಸಾಕ್ಷಿಗಳಾದ ಪ್ರಾಸಾ- 5-ಕಮಲಮ್ಮ-ಮೃತಳ ತಾಯಿಯ ಮತ್ತು ಪ್ರಾಸಾ- 7-ಹನಮಂತನ ಸಾಕ್ಷ್ಯದಲ್ಲಿ ಯಾವುದೇ ವ್ಯತ್ಯಾಸವಿಲ್ಲವೆಂದು ಹಾಗೂ ಅವರ ಸಾಕ್ಷ್ಯವು ವೈದ್ಯಕೀಯ ಸಾಕ್ಷ್ಯದಿಂದ ಅತ್ಯುತ್ತಮ ರೀತಿಯಲ್ಲಿ ಸಮರ್ಥಿತವಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.ಪ್ರಾಸಾ -5 ಮತ್ತು ಪ್ರಾಸಾ -7 ಇವರ ಸಾಕ್ಷ್ಯದ ಗುಣಾರ್ಹತೆಗಳ ಆಧಾರದ ಮೇಲೆ, ಅಪೀಲುದಾರರು ಮೃತನ ಹತ್ಯೆ ಮಾಡಿದ್ದಾರೆಂದು ಕೆಳ ನ್ಯಾಯಾಲಯಗಳು ಸರಿಯಾಗಿಯೇ ನಿರ್ಣಯಿಸಿವೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ತನಿಖಾಧಿಕಾರಿಯಾದ ಪ್ರಾಸಾ-16-ದತ್ತಪ್ಪ ಮತ್ತು ಪ್ರಾಸಾ-17-ಪೊಲೀಸ್ ಕಾನ್ಸ್ಟೇಬಲ್ ಎಸ್. ವೈ. ಹುಣಸಿಕಟ್ಟಿ ಇವರ ಸಾಕ್ಷ್ಯ ಲ್ಯ ಹಾಗೂ ಆರೋಪಿಸಂಖ್ಯೆ: 1 ಈತನಿಂದ ಎಮ್- 1-ಕತ್ತಿಯನ್ನು ಮತ್ತು ಘಟನೆ ನಡೆದ ಸ್ಥಳದಿಂದ ಮುದ್ದೆ ಮಾಲು 2 ಮತ್ತು 3 ಇವುಗಳನ್ನು ವಶಪಡಿಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಆರೋಪಿಯ ಸಾಕ್ಷ್ಯವು ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಾಕಷ್ಟು ಸಮರ್ಥಿಸುತ್ತವೆ ಹಾಗೂ ಅಪೀಲುದಾರರ -1 ನೇ, 2 ನೇ ಮತ್ತು 4 ನೇ ಆರೋಪಿಗಳ ಮತ್ತು ತಲೆಮರೆಸಿಕೊಂಡ ಅಪೀಲುದಾರ ಆರೋಪಿಸಂಖ್ಯೆ: 3 ಈತನ ಅಪರಾಧವನ್ನು ಅಧಿವಿಚಾರಣಾ ನ್ಯಾಯಾಲಯವು ಸರಿಯಾಗಿಯೇ ನಿರ್ಣಯಿಸಿದೆ ಹಾಗೂ ಉಚ್ಚ ನ್ಯಾಯಾಲಯವು ಅದನ್ನು

ಸರಿಯಾಗಿಯೇ ಸ್ವೀಕರಿಸಿದೆ ಮತ್ತು ಪ್ರಶ್ನಿತ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಆಧಾರ ಇಲ್ಲವೆಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.

8. ಅಪೀಲುದಾರರ-ಆರೋಪಿಗಳ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು ಮತ್ತು ಕರ್ನಾಟಕ ರಾಜ್ಯದ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ವಾದಗಳನ್ನು ನಾವು ಆಲಿಸಿದ್ದೇವೆ ಹಾಗೂ ಅವರ ನಿವೇದನೆಗಳನ್ನು ನಾವು ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ ಮತ್ತು ಪ್ರಶ್ನಿತ ತೀರ್ಪನ್ನು ಹಾಗೂ 0 ದಾಖಲೆಯಲ್ಲಿನ ಸಾಕ್ಷ್ಯಗಳನ್ನು ಮತ್ತು ಮುದ್ದೆ ಮಾಲುಗಳನ್ನು ಅವಲೋಕಿಸಿದ್ದೇವೆ.

9. ಪ್ರಾಸಾ -1 ರಿಂದ 4 ಇವರು ಸ್ವತಂತ್ರ ಪ್ರತ್ಯಕ್ಷದರ್ಶಿಗಳಾಗಿರುವರೆಂದು ಹೇಳಲಾಗಿದ್ದು, ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಮರ್ಥಿಸಿರುವುದಿಲ್ಲ ಮತ್ತು ಅದಕ್ಕೆ ಪ್ರತಿಕೂಲವಾಗಿದ್ದಾರೆ.ದಿನಾಂಕ: 14.06.2002 ರ ಬೆಳಿಗ್ಗೆ, ಎಂದರೆ ಘಟನೆ ನಡೆದ ದಿನದಂದು, ಪ್ರಾಸಾ- 6-ಮರೆಪ್ಪ-ಮೃತನ ತಂದೆ ಮದುವೆ ಸಮಾರಂಭಕ್ಕೆಂದು ಕೌಲೂರು ಗ್ರಾಮಕ್ಕೆ ಹೋಗಿದ್ದನು.ಪ್ರಾಸಾ- 7-ಹನಮಂತ ಮೃತನ ಸಹೋದರ ಬೆಳಿಗ್ಗೆಯೇ ಬೇಸಾಯ ಮಾಡಲು ಜಮೀನಿಗೆ ಹೋಗಿದ್ದನು.ಪ್ರಾಸಾ- 5-ಮೃತ ಭೀಮರಾಯನ ತಾಯಿಯು ಪ್ರತ್ಯಕ್ಷ ಸಾಕ್ಷಿಯಾಗಿದ್ದಾಳೆ ಹಾಗೂ ಊಟಕ್ಕೆಂದು ಹೊಲದಿಂದ ಮರಳಿ ಮನೆಗೆ ಬಂದಿದ್ದ ಪ್ರಾಸಾ -7 ಈತನು ತಾನು ಘಟನೆಯನ್ನು ನೋಡಿರುವುದಾಗಿ ಸಹ ಹೇಳಿದ್ದಾನೆ.

10. ಪ್ರಾಸಾ- 5-ಮೃತನ ತಾಯಿಯು, ತನ್ನ ಸಾಕ್ಷ್ಯದಲ್ಲಿ,ದಿನಾಂಕ: 14.06.2002 ರಂದು ಬೆಳಿಗ್ಗೆ 9.00 ಗಂಟೆಗೆ, ಮೃತ ಭೀಮರಾಯ ಬಹಿರ್ದೆಸೆಗೆಂದು ಹೊರಗೆ ಹೋಗಿದ್ದನು ಮತ್ತು ಆತನು ಮರಳಿ ಮನೆಗೆ ಬರುವಾಗ, ಆರೋಪಿಸಂಖ್ಯೆ: 1 ಈತನು ಕತ್ತಿ-ಎಮ್‌ಒ -1 ನ್ನು, ಆರೋಪಿಸಂಖ್ಯೆ: 2 ಈತನು ಕತ್ತಿ ಎಮ್‌ಒ -2 ನ್ನು ಮತ್ತು ಆರೋಪಿಸಂಖ್ಯೆ: 4 ಈತನು ಕೊಡಲಿಯ ಹಿಡಿ ಎಮ್‌ಒ -3 ನ್ನು ಕೈಯಲ್ಲಿ ಹಿಡಿದುಕೊಂಡು ಮೃತನ ಬೆನ್ನು ಹತ್ತಿದರು ಹಾಗೂ ಮೃತನು ಅಡುಗೆ ಮನೆಯೊಳಗೆ ಹೋಗಿ ಬಾಗಿಲನ್ನು ಹಾಕಿಕೊಂಡನು ಎಂದು ಹೇಳಿದ್ದಾಳೆ.ಪ್ರಾಸಾ -5 ಈಕೆಯು, ಆರೋಪಿಗಳಿಗೆ ದಯೆ ತೋರುವಂತೆ ಬೇಡಿಕೊಂಡಳೆಂದು ಮತ್ತು ಭೀಮರಾಯನಿಗೆ ಏನೂ ಮಾಡದಿರುವಂತೆ ಅವರನ್ನು ಕೇಳಿದಳೆಂದು; ಆದಾಗ್ಯೂ, ಆರೋಪಿಗಳು, ಅಡುಗೆ ಮನೆಯ ಬಾಗಿಲನ್ನು ತಳ್ಳಿದರು ಮತ್ತು ಭೀಮರಾಯನು ಪಡಶಾಲೆಗೆ ಬಂದನು ಹಾಗೂ ಆ ಸಮಯದಲ್ಲಿ, ಆರೋಪಿಸಂಖ್ಯೆ: 1 ಈತನು, ಎಮ್‌ಒ- 1-ಕತ್ತಿಯಿಂದ ಮೃತನ ಎಡ ತೊಡೆಯ ಮೇಲೆ ಹಲ್ಲೆ ಮಾಡಿದನು ಮತ್ತು ಆರೋಪಿಸಂಖ್ಯೆ: 2 ಈತನು, ಎಮ್‌ಒ- 1 ಕತ್ತಿಯಿಂದ ಮೃತನ ಮೂಗು ಮತ್ತು ಎಡ ಕಣ್ಣಿನ ಹುಬ್ಬಿನ ಮೇಲೆ ಇರಿದನು; ಆರೋಪಿಸಂಖ್ಯೆ: 1 ಈತನು ಪುನಃ ಮೃತನ ಬಲ ಮೊಣಕೈ ಮೇಲೆ ಕತ್ತಿಯಿಂದ ಇರಿದನು ಎಂದು ಹೇಳಿಕೆ ನೀಡಿದ್ದಾಳೆ.ಆರೋಪಿಸಂಖ್ಯೆ: 1 ರಿಂದ 4 ಇವರು ಭೀಮರಾಯನ ಕಾಲುಗಳನ್ನು ಮತ್ತು ಕೈಗಳನ್ನು ಒತ್ತಿ ಹಿಡಿದರು ಮತ್ತು ಆರೋಪಿಸಂಖ್ಯೆ: 1 ಈತನು, ಭೀಮರಾಯನ ಕುತ್ತಿಗೆಯನ್ನು ಕತ್ತರಿಸಿದನು ಮತ್ತು ಭೀಮರಾಯನು ಸ್ಥಳದಲ್ಲೇ ಸತ್ತುಹೋದನು ಎಂದು ಆರೋಪಿಸಲಾಗಿದೆ.ಊಟಕ್ಕೆಂದು ಗದ್ದೆಯಿಂದ ಮರಳಿ ಬಂದಿದ್ದ ಪ್ರಸಾ- 7-ಮೃತನ ಸಹೋದರನು ಸಹ ಘಟನೆಗೆ ಸಾಕ್ಷಿಯಾದನು ಮತ್ತು ಆರೋಪಿಗಳ ಅತಿರೇಕದ ವರ್ತನೆ ಬಗ್ಗೆ ತಿಳಿಸಿದ್ದಾನೆ.ಆರೋಪಿಸಂಖ್ಯೆ: 1 ರಿಂದ 3 ಇವರ ತಾಯಿ ಮತ್ತು ಆರೋಪಿಸಂಖ್ಯೆ: 4 ಈತನ ಪತ್ನಿಯೊಂದಿಗೆ ಮೃತನ ಅಕ್ರಮ ಸಂಬಂಧವು ಈ ಕೊಲೆಯ ಉದ್ದೇಶವಾಗಿದೆ ಎಂದು ಹೇಳಲಾಗಿದೆ.ಆರೋಪಿಸಂಖ್ಯೆ: 4 ಈತನ ಮನೆಗೆ ಮೃತನು ಹೋಗುತ್ತಿದ್ದನು ಮತ್ತು ಆರೋಪಿಸಂಖ್ಯೆ: 4 ಈತನ ಪತ್ನಿಯು ಮೃತನ ಮನೆಗೆ ಹೋಗುತ್ತಿದ್ದಳೆಂದು ಆರೋಪಿಸಲಾಗಿದೆ.

11. ಹೇಗೆ ಮತ್ತು ಯಾವಾಗ ಪ್ರಾಸಾ -5 ಈಕೆಯ ಹೇಳಿಕೆಯನ್ನು ದಾಖಲಿಸಲಾಯಿತು ಹಾಗೂ ಪ್ರಾಸಾ -7 ಯಾವಾಗ ಮನೆಗೆ ಮರಳಿ ಬಂದನು ಎಂಬುದಕ್ಕೆ ಸಂಬಂಧಪಟ್ಟಂತೆ ಆಕೆಯ ಸಾಕ್ಷ್ಯದಲ್ಲಿ ವ್ಯತ್ಯಾಸಗಳು ಮತ್ತು ವಿರೋಧಾಭಾಸಗಳಿವೆ ಎಂಬ ಕಾರಣದ ಮೇಲೆ, ಆಕೆಯ ಸಾಕ್ಷ್ಯವನ್ನು ಪ್ರಶ್ನಿಸಲಾಗಿದೆ.ತನ್ನ ಸಾಕ್ಷ್ಯದಲ್ಲಿ ಪ್ರಾಸಾ -5 ಈಕೆಯು, ಸೈದಾಪುರ ಪೊಲೀಸರು ಘಟನೆ ನಡೆದ ಸ್ಥಳಕ್ಕೆ ಬಂದು ಆಕೆಯ ಹೇಳಿಕೆಯನ್ನು ದಾಖಲಿಸಿರುವುದಾಗಿ ಹೇಳಿದ್ದಾಳೆ.ಇದಲ್ಲದೆ, ಪೊಲೀಸರು ಆಕೆಯನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಪೊಲೀಸ್ ಠಾಣೆಯಲ್ಲಿ ಆಕೆಯ ಹೇಳಿಕೆಯನ್ನು ತೆಗೆದುಕೊಂಡಿದ್ದಾರೆಂದು ಆಕೆಯು ಹೇಳಿದ್ದಾಳೆ.ತನ್ನ ಪಾಟಿ ಸವಾಲಿನಲ್ಲಿ ಪ್ರಾಸಾ -5 ಈಕೆಯು, ಒಮ್ಮೆ " ಗ್ರಾಮದ ದಳಪತಿಯು ಪೊಲೀಸರಿಗೆ ಸುಮಾರು ಬೆಳಿಗ್ಗೆ 10.00 ಗಂಟೆಗೆ ತಿಳಿಸಿದನೆಂದು ಮತ್ತು ಪೊಲೀಸರು ಬೆಳಿಗ್ಗೆ 11.00 ಗಂಟೆಗೆ ಬಂದರೆಂದು ಹಾಗೂ ಆಕೆಯ ಹೇಳಿಕೆಯನ್ನು ದಾಖಲಿಸಿ, ಆಕೆಯ ಎಡ ಹೆಬ್ಬೆಟ್ಟಿನ ಗುರುತನ್ನು ಪಡೆದರೆಂದು ...... " ಹೇಳಿದ್ದಾಳೆ.ಇನ್ನೊಂದೆಡೆ,

ಪ್ರಾಸಾ -5, ತನ್ನ ಪತಿಯು ಕೌಲೂರು ಗ್ರಾಮದಿಂದ ಮನೆಗೆ ಬರುವವರೆಗೆ ಮನೆಯಲ್ಲಿದ್ದಳೆಂದು ಮತ್ತು ತರುವಾಯದಲ್ಲಿ ಪ್ರಾಸಾ -6 ಜೊತೆ ಪೊಲೀಸ್ ಠಾಣೆಗೆ ಹೋಗಿದ್ದಳೆಂದು ಹೇಳಿದ್ದಾಳೆ.ಪ್ರಾಸಾ -5 ಈಕೆಯ ಸಾಕ್ಷ್ಯವು ಹಲವು ವ್ಯತ್ಯಾಸಗಳಿಗೆ ಆಸ್ಪದ ಕೊಡುವುದರಿಂದ ಆಕೆಯು ಪ್ರತ್ಯಕ್ಷ ಸಾಕ್ಷಿಯಾಗುವುದಿಲ್ಲವೆಂದು ಮಾನ್ಯ ಹಿರಿಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವಲ್ಲಿ ಮತ್ತು ಜೆಎಮ್‌ಎಫ್ಸಿಗೆ ಪ್ರಥಮ ವರ್ತಮಾನ ವರದಿಯನ್ನು ಕಳುಹಿಸುವಲ್ಲಿ ವಿಳಂಬ ಉಂಟಾದ ಹಿನ್ನಲೆಯಲ್ಲಿ, ಹೇಗೆ ಮತ್ತು ಯಾವಾಗ ಪ್ರಾಸಾ -5 ಈಕೆಯ ಹೇಳಿಕೆಯನ್ನು ಪೊಲೀಸರು ದಾಖಲಿಸಿದ್ದರು ಎಂಬುದಕ್ಕೆ ಆಕೆಯು ನೀಡಿರುವ ವೈರುಧ್ಯದ ಹೇಳಿಕೆಗಳು ಪ್ರಸಕ್ತ ಸುಸಂಗತವಾಗಿದ್ದು, ಇದು, ಆರೋಪಿಯ ಮೇಲಿನ ಸುಳ್ಳು ಇಂಗಿತ ವಿರುದ್ಧದ ರಕ್ಷಣಾತ್ಮಕ ವಾದವನ್ನು ಸಮರ್ಥಿಸುತ್ತವೆ ಎಂದು ಅಪೀಲುದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.

12. ವಿಚಾರಣಾ ನ್ಯಾಯಾಲಯವು ತನ್ನ ತೀರ್ಪಿನಲ್ಲಿ, ಘಟನೆ ನಡೆದ ಸ್ಥಳದಲ್ಲಿ, ಸುಸಂಗತ ಸಮಯದಲ್ಲಿ ಮನೆಯಲ್ಲಿ ಪ್ರಾಸಾ -5 ಇದ್ದ ಬಗ್ಗೆ ಮತ್ತು ಪ್ರಸಾ -5 ಈಕೆಯು ಹೇಗೆ ಸಹಜ ಸಾಕ್ಷಿ ಎಂಬ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿದೆ.ಸಾಕ್ಷಿ ಕಟಕಟೆಯಲ್ಲಿ ಪ್ರಾಸಾ -5 ಇದ್ದಾಗ, ಆಕೆಯನ್ನು ನೋಡುವ ಮತ್ತು ಗಮನಿಸುವ ಅವಕಾಶವನ್ನು ಹೊಂದಿದ್ದಂಥ ವಿಚಾರಣಾ ನ್ಯಾಯಾಲಯವು, ಆಕೆಯು ಘಟನೆಯ ಸ್ಥೂಲ ಚಿತ್ರಣ ನೀಡಿರುವುದನ್ನು ಹಾಗೂ ಆಕೆಯ ಸಾಕ್ಷ್ಯವು ವಿಶ್ವಾಸಾರ್ಹವಾದುದು ಎಂಬುದನ್ನು ಗಮನಿಸಿದೆ.ಪ್ರಾಸಾ -5 ಅನಕ್ಷರಸ್ಥ ಮಹಿಳೆಯಾಗಿದ್ದು, ಪೊಲೀಸರು ಆಕೆಯ ಹೇಳಿಕೆಯನ್ನು ಯಾವಾಗ ಮತ್ತು ಹೇಗೆ ದಾಖಲಿಸಿದ್ದರು ಎಂಬ ವೈರುಧ್ಯದ 0 ಹೇಳಿಕೆಗಳು, ಆಕೆಯ ಸಾಕ್ಷ್ಯವನ್ನು ಸಂಶಯಿಸುವುದಕ್ಕೆ ಕಾರಣವಾಗುವುದಿಲ್ಲವೆಂಬುದನ್ನು ಸಹ ವಿಚಾರಣಾ ನ್ಯಾಯಾಲಯವು ಗಮನಿಸಿದ್ದು, ಈ ನಿರ್ಣಯವನ್ನು ಉಚ್ಚನ್ಯಾಯಾಲಯವು ಸ್ಥಿರೀಕರಿಸಿದೆ.ವಿಭಿನ್ನ ನಿಲುವು ತೆಗೆದುಕೊಳ್ಳಲು ನಮಗೆ ಯಾವುದೇ ಕಾರಣ ಕಂಡುಬರುತ್ತಿಲ್ಲ.

13. ಸಾಕ್ಷಿದಾರಳ ಸಾಕ್ಷ್ಯವನ್ನು ವಿವೇಚಿಸುವಾಗ, ಸಾಕ್ಷಿದಾರಳ ಸಾಕ್ಷ್ಯವನ್ನು ಪೂರ್ಣವಾಗಿ ಓದಲಾಗಿರುವುದು ವಾಸ್ತವವೇ ಎಂಬುದನ್ನು ವಿಶ್ಲೇಷಿಸುವುದು ಉದ್ದೇಶವಾಗಿರುತ್ತದೆ.ಒಮ್ಮೆ ಇಂಗಿತವನ್ನು ರೂಪಿಸಿದರೆ, ಸಾಕ್ಷ್ಯವನ್ನು ಮತ್ತು ಆರೋಪಿತ ವ್ಯತ್ಯಾಸಗಳನ್ನು ಮೌಲ್ಯಮಾಪನ ಮಾಡುವುದು ಮತ್ತು ತರುವಾಯ, ಅದು ಪ್ರಾಸಿಕ್ಯೂಷನ್ ಮೊಕದ್ದಮೆಯ ಸಾಮಾನ್ಯ ಉದ್ದೇಶಕ್ಕೆ ವಿರುದ್ಧವಾಗಿದೆಯೇ ಎಂಬುದನ್ನು ಕಂಡುಕೊಳ್ಳುವುದು ನ್ಯಾಯಾಲಯಕ್ಕೆ ಅಗತ್ಯವಾಗುತ್ತದೆ.ಪ್ರತ್ಯಕ್ಷ ಸಾಕ್ಷಿಯ ಸಾಕ್ಷ್ಯವು ವಿಶ್ವಾಸಾರ್ಹ ಮತ್ತು ನಂಬಿಕೆಯೋಗ್ಯವಾಗಿದೆಯೆಂದು ಕಂಡುಬಂದರೆ, ಪ್ರಾಸಿಕ್ಯೂಷನ್ ಮೊಕದ್ದಮೆಯ ಮುಖ್ಯಾಂಶದ ಮೇಲೆ ಪರಿಣಾಮ ಬೀರದಿರುವ ಸಣ್ಣ ಪುಟ್ಟ ವ್ಯತ್ಯಾಸಗಳನ್ನು, ಸಾಕ್ಷಿದಾರಳ ವಿಶ್ವಾಸಾರ್ಹತೆಯನ್ನು ಅನುಮಾನಿಸುವ ಕಾರಣಗಳನ್ನಾಗಿಸಲಾಗುವುದಿಲ್ಲ.

14. ಸಣ್ಣ ಪುಟ್ಟ ವ್ಯತ್ಯಾಸಗಳು ಮತ್ತು ಅಸಂಗತ ಹೇಳಿಕೆಗಳು, ಅನ್ಯಥಾ ಅದು ವಿಶ್ವಾಸಾರ್ಹವಾಗಿದೆಯೆಂದು ಕಂಡುಬಂದರೆ, ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಅವಶ್ಯವಾಗಿ ಕೊನೆಗಾಣಿಸುವುದಿಲ್ಲ.ಬಷ್ ಸಿಂಗ್ -ವಿರುದ್ಧ-ಪಂಜಾಬ್ ರಾಜ್ಯ ಮತ್ತು ಇನ್ನೊಬ್ಬರು (2013) 12 ಎಸ್ಸಿಸಿ 187 ಮೊಕದ್ದಮೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದೆ:

32. ಸುನೀಲ್ ಕುಮಾರ್ ಸಂಭು ದಯಾಳ್ ಗುಪ್ತಾ ವಿರುದ್ಧ ಮಹಾರಾಷ್ಟ್ರ ರಾಜ್ಯ (2010) 13 ಎಸ್ಸಿಸಿ 657 ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ (ಎಸ್ಸಿ ಪುಟ 671, ಕಂಡಿಕೆ 30):"30. ಸಾಕ್ಷ್ಯದ ಗುಣಾರ್ಹತೆಯನ್ನು ವಿವೇಚಿಸುವಾಗ, ವಿರೋಧಾಭಾಸಗಳು/ಲೋಪಗಳು, ವಿಚಾರಣೆಯನ್ನು ಮುಖ್ಯವಾಗಿ ಬಾಧಿಸಬಹುದೆಂಬಂಥ ಮಹತ್ವವನ್ನು ಅವು ಹೊಂದಿವೆಯೇ ಎ ಂ ಬ ಂ ದನು ನ್ಯಾಯಾಲ ಂ ವು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.ಪ್ರಾಸಿಕ್ಯೂಷನ್ ಮೊಕದ್ದಮೆಯ ಮುಖ್ಯಾಂಶವನ್ನು ಪರಿಣಮಿಸದ ಸಣ್ಣಪುಟ್ಟ ಅಸಮಂಜಸತೆಗಳು, ಅಸಾಂಗತ್ಯತೆಗಳು, ಸೇರಿಸಿದ ಹೇಳಿಕೆಗಳು ಅಥವಾ ಸುಧಾರಣೆಗಳನ್ನು, ಸಾಕ್ಷ್ಯದ ಸಮಗ್ರತೆಯಲ್ಲಿ ಅದನ್ನು ನಿರಾಕರಿಸುವ ಅ ಕಾರಣವನ್ನಾಗಿಸಬಾರದು.ಇಡೀ ಸಾಕ್ಷ್ಯವನ್ನು ಪರಾಮರ್ಶಿಸಿದ ನಂತರ, ವಿಚಾರಣಾ ನ್ಯಾಯಾಲಯವು, ಸಾಕ್ಷಿದಾರರ ವಿಶ್ವಾಸಾರ್ಹತೆಯ ಬಗ್ಗೆ ಅಭಿಪ್ರಾಯವನ್ನು ರೂಪಿಸಬೇಕು ಮತ್ತು ಸಾಮಾನ್ಯ ಕ್ರಮವಿಧಾನದಲ್ಲಿ ಅಪೀಲು ನ್ಯಾಯಾಲಯವು, ಸಮರ್ಥನೀಯ ಕಾರಣಗಳಿಲ್ಲದೆ ಅದನ್ನು ಪುನಃ ಪರಿಶೀಲಿಸುವುದನ್ನು ಸಮರ್ಥಿಸುವುದಿಲ್ಲ.(ನೋಡಿ:ರಾಜ್ಯ ವಿರುದ್ಧ ಸರವಣನ್ (2008) 17 ಎಸ್ಸಿಸಿ 587). "

33. ರಾಜ್ ಕುಮಾರ್ ಸಿಂಗ್ -ವಿರುದ್ಧ ರಾಜಸ್ಥಾನ ರಾಜ್ಯ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:(ಎಸ್ಸಿ ಪುಟ 740, ಕಂಡಿಕೆ 43)

"43. ಸಾಕ್ಷಿದಾರನ ಸಾಕ್ಷ್ಯವನ್ನು ವಿವೇಚಿಸುವಾಗ, ಪ್ರಾಸಿಕ್ಯೂಷನ್ ಮೊಕದ್ದಮೆಯ ಮುಖ್ಯಾಂಶವನ್ನು ಪರಿಣಮಿಸದ ಕ್ಷುಲ್ಲಕ ವಿಷಯಗಳನ್ನು, ಹಾಗೆ ಒದಗಿಸಲಾದ ಸಾಕ್ಷ್ಯವನ್ನು ಅದರ ಸಮಗ್ರತೆಯನ್ನು ನಿರಾಕರಿಸಲು ನ್ಯಾಯಾಲಯವನ್ನು ಪ್ರಚೋದಿಸ ಬಾರದೆಂಬುದು ಸುಸ್ಥಾಪಿತ ಕಾನೂನಿನ ಸ್ಥಿತಿಯಾಗಿದೆ; ಸಾಕ್ಷಿದಾರನ ವಿಶ್ವಾಸಾರ್ಹತೆಯನ್ನು ಯಾವುದೇ ರೀತಿಯಲ್ಲೂ ಕಡಿಮೆಗೊಳಿಸದಿರುವ ಸು ಂ ಗತವಲ್ಲದ ವಿವರಗಳನ್ನು, ಲೋಪಗಳನ್ನಾಗಿ ಅಥ ವಾ ವಿರೋಧಾಭಾಸಗಳನ್ನಾಗಿ ಪರಿಗಣಿಲಾಗುವುದಿಲ್ಲ.ಆದುದರಿಂದ, ನ್ಯಾಯಾಲಯಗಳು ಎಚ್ಚರಿಕೆಯಿಂದಿರಬೇಕು ಮತ್ತು ಸಾಕ್ಷ್ಯದ ಗುಣಾರ್ಹತೆಯನ್ನು ವಿವೇಚಿಸುವ ಅವರ ಕಾರ್ಯದಲ್ಲಿ ಅತ್ಯಂತ ನಿರ್ದಿಷ್ಟವಾಗಿರಬೇಕು.ಸಾಕ್ಷಿದಾರನ ಸಾಕ್ಷ್ಯವನ್ನು ಅದರ ಸಮಗ್ರತೆಯಲ್ಲಿ ಅರ್ಥೈಸಿದರೆ ಮತ್ತು ಅದು ಆ ಸಾಕ್ಷ್ಯದಲ್ಲಿ ಇರುವುದಾಗಿ ಕ ಂ ಡುಬ ಂ ದರೆ, ಅದು ಸತ್ಯದ ಭಾವವನ್ನು ಹೊಂದಿರುವುದಾಗಿ ಕಂಡುಬರುತ್ತದೆ ಮತ್ತು ನಂತರ ಸದರಿ ಸಾಕ್ಷ್ಯದಲ್ಲಿ ಸಮಗ್ರವಾಗಿ ತೋರಿಸಲಾದ ಲೋಪಗಳನ್ನು, ನ್ಯೂನ್ಯತೆಗಳನ್ನು ಮತ್ತು ಅಸ್ಥಿರತೆಗಳನ್ನು ಗಮನದಲ್ಲಿರಿಸಿಕೊಂಡು, ಹೆಚ್ಚು ಚ ನಿರ್ದಿಷ್ಟವಾಗಿ ಸಾಕ್ಷ್ಯವನ್ನು ಪರಿಶೀಲಿಸುವುದು ಹಾಗೂ ಸಾಕ್ಷಿದಾರರು ಒದಗಿಸಿದ ಸಾಕ್ಷ್ಯದ ಸ್ವರೂಪಕ್ಕೆ ಅವು ಸಂಪೂರ್ಣ ವ್ಯತಿರಿಕ್ತವಾಗಿವೆಯೇ ಮತ್ತು ಅದನ್ನು ನ ಂ ಬಿಕೆಗೆ ಯೋಗ್ಯವಲ್ಲವನ್ನಾಗಿಸಿ, ಅಂಥ ಮೌಲ್ಯಮಾಪನದ ಕಾರಣದಿಂದ ಅಂಥ ಸಾಕ್ಷ್ಯದ ಸಿಂಧುತ್ವವನ್ನು ಕುಗ್ಗಿಸಿದೆಯೇ ಎಂಬುದನ್ನು ನಿರ್ಧರಿಸಲು ಅವುಗಳನ್ನು ಪ್ರತ್ಯೇಕವಾಗಿ ಮೌಲ್ಯಮಾಪನ ಮಾಡುವುದು ನ್ಯಾಯಾಲಯಕ್ಕೆ ಅಗತ್ಯವಾಗಬಹುದು. "

15. ಪೊಲೀಸರು ಪ್ರಾಸಾ -5 ಈಕೆಯ ಹೇಳಿಕೆಯನ್ನು ಯಾವಾಗ ಮತ್ತು ಹೇಗೆ ದಾಖಲಿಸಿದ್ದರು ಎಂಬ ಬಗ್ಗೆ ಸ್ವಲ್ಪಮಟ್ಟಿನ ವ್ಯತ್ಯಾಸಗಳಿವೆ ಎಂಬುದರಲ್ಲಿ ೧ ಯಾವುದೇ ಸಂಶಯವಿಲ್ಲ. ಒಂದು ಕಡೆ, ಪ್ರಾಸಾ -5 ಈಕೆಯು, ಪೊಲೀಸರು ಮಲ್ಲಿಕಾರ್ಜುನ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಬೆಳಿಗ್ಗೆ 11.00 ಗಂಟೆಗೆ ಗ್ರಾಮಕ್ಕೆ ಬಂದು, ಆಕೆಯ ದೂರನ್ನು ಪಡೆದು, ಅದಕ್ಕೆ ಆಕೆಯ ಎಡ ಹೆಬ್ಬೆರಳಿನ ಗುರುತನ್ನು ಪಡೆದುಕೊಂಡಿದ್ದಾರೆ ಎಂದು ಹೇಳಿದರೆ, ಪ್ರಾಸಾ-17-ಪಿಎಸ್ಐ ಇವರು, ಪ್ರಾಸಾ -5 ಪೊಲೀಸ್ ಠಾಣೆಗೆ ಬಂದು, ಮಧ್ಯಾಹ್ನ 01.15 ಗಂಟೆಗೆ ದೂರನ್ನು ಸಲ್ಲಿಸುವವರೆಗೆ ಘಟನೆಯ ಬಗ್ಗೆ ತನಗೆ ಗೊತ್ತಿರಲಿಲ್ಲವೆಂದು ಹಾಗೂ ಅದಕ್ಕೆ ಮೊದಲು ಗ್ರಾಮದ ದಳಪತಿಯಿಂದ ಯಾವುದೇ ದೂರವಾಣಿ ಕರೆಯನ್ನು ತಾನು ಸ್ವೀಕರಿಸಿಲ್ಲವೆಂದು ಹೇಳಿದ್ದಾನೆ.ವಿಚಾರಣಾ ನ್ಯಾಯಾಲಯವು ಗಮನಿಸಿದಂತೆ, ಪ್ರಾಸಾ -5 ಈಕೆಯು ಒಬ್ಬ ಸಾಮಾನ್ಯ ಗೃಹಿಣಿಯಾಗಿದ್ದು, ಅನಕ್ಷರಸ್ಥ ಮಹಿಳೆಯಾಗಿದ್ದಾಳೆ.ಸಾಕ್ಷಿ ಕಟಕಟೆಯಲ್ಲಿದ್ದಾಗ, ಪ್ರಾಸಾ -5 ರಂಥ ಸಾಕ್ಷಿದಾರಳಿಗೆ ಬೇರೆ ಬೇರೆ ಹೇಳಿಕೆಗಳನ್ನು ನೀಡಲು ನ್ಯಾಯಾಲಯದಂಥ ವಾತಾವರಣವು ಕಾರಣವಾಗಿ ಭೀತಿಗೊಳ್ಳುವುದು ಅತ್ಯಂತ ಸಹಜ. ಇತರ ಯಾರೇ ಸಾಕ್ಷಿದಾರನಂತೆ ಅಂತಹುದೇ ಗುಣಮಟ್ಟ ಮತ್ತು ನಿಖರತೆಯಿಂದ ಹಳ್ಳಿಗಾಡಿನ ವ್ಯಕ್ತಿಗಳ ಸಾಕ್ಷ್ಯವನ್ನು ಕುರಿತು ನ್ಯಾಯಾಲಯವು ನಿರ್ಣಯಿಸುವುದಿಲ್ಲ.ವಿಚಾರಣಾ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ, ಘಟನೆ ನಡೆದ ಸ್ಥಳಕ್ಕೆ ಸಂಬಂಧಿಸಿದಂತೆ ಪ್ರಾಸಾ -5 ಈಕೆಯ ಸಾಕ್ಷ್ಯವನ್ನು, ಪ್ರಾಸಾ-17 ಪಿಎಸ್ಐ ಇವರು ಬರೆದ ಸ್ಥಳ ಪಂಚನಾಮೆಯ (ನಿಶಾನೆ-ಪಿ 7) ಮೂಲಕ ಮತ್ತು ಸ್ವತಃ ಪಡಸಾಲೆಯಲ್ಲಿ ಮೃತನ ಶರೀರದ ಮಹಜರಿನ ಮೂಲಕ ಸಮರ್ಥಿಸಲಾಗಿದೆ.ಪ್ರಾಸಾ -5 ಈಕೆಯ ಹೇಳಿಕೆಯಲ್ಲಿನ ಆರೋಪಿತ ವ್ಯತ್ಯಾಸಗಳು, ನಮ್ಮ ಅಭಿಪ್ರಾಯದಲ್ಲಿ, ಹಾಗೆ ಆಕೆಯ ಸಾಕ್ಷ್ಯವನ್ನು ಸಂಶಯಿಸುವುದು ವಿಶ್ವಾಸಾರ್ಹತೆಯ ಮೇಲೆ ಪರಿಣಾಮ ಬೀರುವುದಿಲ್ಲ.

16. ಒಬ್ಬ ಸಾಕ್ಷಿದಾರನು/ಳು ಮೃತನಿಗೆ/ಪ್ರಾಸಿಕ್ಯೂಷನ್ ಸಾಕ್ಷಿದಾರನಿಗೆ ಪಕ್ಷಪಾತಿಯಾಗಿರುವನು/ಳು ಅಥವಾ ಸಂಬಂಧಿಕನಾಗಿರುವನು/ಳಾಗಿರುವಳು ಎಂಬ ಕಾರಣ ಮಾತ್ರದಿಂದ ಆ ಸಾಕ್ಷಿದಾರನ/ ಳ ಸಾಕ್ಷ್ಯವನ್ನು ನಂಬದಿರಲಾಗುವುದಿಲ್ಲ.ಸಾಕ್ಷಿದಾರನು/ಳು ಹಾಜರಿದ್ದನೇ/ಳೇ ಅಥವಾ ಆತನು/ಆಕೆಯು ನಿಜವನ್ನು ಹೇಳಿದ್ದನೇ/ಳೇ ಅಥವಾ ಇಲ್ಲವೇ ಎಂಬುದನ್ನು ವಿಶ್ಲೇಷಿಸಬೇಕಾಗುತ್ತದೆ.ಘಟನೆ ನಡೆದ ಸ್ಥಳವು, ಮೃತ ಭೀಮರಾಯನ ಮನೆಯಾಗಿರುವುದರಿಂದ, ಪ್ರಾಸಾ- 5-ಮೃತನ ತಾಯಿಯು, ಘಟನೆ ಬಗ್ಗೆ ಮಾತನಾಡಲು ಸಹಜ ಸಾಕ್ಷಿದಾರಳಾಗಿರುತ್ತಾಳೆ.ಪ್ರಾಸಾ- 5-ಮೃತಳ ತಾಯಿಯು, ಹೇಗೆ ತಾನು ಮನೆಯಲ್ಲಿದ್ದಳು ಮತ್ತು ಹೇಗೆ ಆಕೆಯು ಘಟನೆ ನಡೆದ ಸ್ಥಳದಲ್ಲಿರಬೇಕಾಯಿತು ಎಂಬುದನ್ನು ಸಹ ವಿವರಿಸಿದ್ದಾಳೆ.ಕೆಳ ನ್ಯಾಯಾಲಯಗಳು ಗಮನಿಸಿದಂತೆ, ಪಾಟಿ-ಸವಾಲಿನ ನಂತರವೂ, ಪ್ರಾಸಾ 5 ಈಕೆಯ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ಸಂಶಯವನ್ನು ಹುಟ್ಟು ಹಾಕುವಂಥ ಏನನ್ನೇ ಆಗಲಿ ಸಾಬೀತುಪಡಿಸಲು ಪ್ರತಿವಾದಿಗಳು ಶಕ್ತರಾಗಿಲ್ಲ.ಇದಲ್ಲದೆ, ಪ್ರಾಸಾ -5

ಈಕೆಯು, ಆರೋಪಿಗಳನ್ನು ತಪ್ಪಾಗಿ ಭಾವಿಸುವುದಕ್ಕೆ ಯಾವುದೇ ಕಾರಣವಿಲ್ಲ.ಮೃತನ ತಾಯಿಯಾಗಿ, ಪ್ರಾಸಾ -5 ಈಕೆಯು ಪೊಲೀಸರ ಅಥವಾ ಯಾರೋ ಒಬ್ಬರ ಸೂಚನೆ ಮೇರೆಗೆ ಆರೋಪಿಯನ್ನು ತಪ್ಪಾಗಿ ಭಾವಿಸಿರುವಳು ಎಂಬುದು ಅತ್ಯಂತ ಅಸಂಭವನೀಯ ಸಂಗತಿ.

17. ಪ್ರಾಸಾ -7 ಈತನು ತನ್ನ ಸಾಕ್ಷ್ಯದಲ್ಲಿ, ಆತನು ಹೊಲಕ್ಕೆ ಬೇಸಾಯ ಮಾಡಲು ಹೋಗಿದ್ದನು ಮತ್ತು ಎಂದಿನಂತೆ ಬೆಳಿಗ್ಗೆ 8.30 ಗಂಟೆಗೆ ಊಟಕ್ಕೆಂದು ೧ ಮನೆಗೆ ಮರಳಿ ಬಂದಿದ್ದನು ಎಂದು ಹೇಳಿದ್ದಾನೆ.ಪ್ರಾಸಾ -7 ಈತನು ಎಲ್ಲಾ ಆರೋಪಿಗಳ ಅತಿರೇಕದ ಕೃತ್ಯದ ಬಗ್ಗೆ ಹೇಳಿದ್ದಾನೆ ಮತ್ತು ಹಾಗಾಗಿ ಆತನನ್ನು ಪ್ರತ್ಯಕ್ಷ ಸಾಕ್ಷಿ ಎಂದು ಹೇಳಬೇಕಾಗುತ್ತದೆ ಹಾಗೂ ನಮ್ಮ ಅಭಿಪ್ರಾಯದಲ್ಲಿ ಈ ನಿವೇದನೆಯು ಸಮ್ಮತಿಯೋಗ್ಯವಾಗಿರುವುದಿಲ್ಲ.ಅಪೀಲುದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು, ಪ್ರಾಸಾ -7 ಈತನನ್ನು ಪ್ರತ್ಯಕ್ಷ ಸಾಕ್ಷಿಯೆಂದು ವಿಚಾರಣಾ ನ್ಯಾಯಾಲಯವು ಪರಿಗಣಿಸಿರುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಪ್ರಾಸಾ -7 ಬೇಸಾಯಕ್ಕೆಂದು ಹೋಗಿದ್ದಂಥ ಜಮೀನು ಬಹಳ ದೂರದಲ್ಲಿದ್ದು, ಜಮೀನಿನಿಂದ ಗಲಾಟೆಯನ್ನು ಕೇಳಲು ಸಾಧ್ಯವಿಲ್ಲವೆಂಬ ವಿಷಯವು ಪ್ರಾಸಾ -5 ಈಕೆ ಸಾಕ್ಷಿಯಿಂದ ಬಯಲಿಗೆ ಬಂದಿದೆ.ಈ ಸಂದರ್ಭದಲ್ಲಿ, ವಾದ-ಪ್ರತಿವಾದಗಳ ಸಲುವಾಗಿ ಪ್ರಾಸಾ -7 ಈತನಿಗೆ ಪ್ರತ್ಯಕ್ಷ ಸಾಕ್ಷಿಯ ಲಕ್ಷಣಗಳನ್ನು ಅನ್ವಯಿಸಲಾಗುವುದಿಲ್ಲವೆಂದು ಊಹೆ ಮಾಡಿದರೂ ಮತ್ತು ಅದನ್ನು ಅಪರಾಧ ಎಸಗಿದ ಸ್ಥಳದ ಎಂದರೆ ಅವರ ಮನೆಯ ಪಡಸಾಲೆಯಷ್ಟರಮಟ್ಟಿಗೆ ಹಾಗೂ ಭೀಮರಾಯನ ಮೇಲೆ ಕಂಡುಬಂದ ಗಾಯಗಳಷ್ಟರಮಟ್ಟಿಗೆ ಪರಿಗಣನೆಗೆ ತೆಗೆದುಕೊಳ್ಳಬಹುದಾಗಿದೆ ಎಂಬ ಆಧಾರದ ಮೇಲೆ ವಿಚಾರಣಾ ನ್ಯಾಯಾಲಯವು ಮುಂದುವರೆದಿದೆ.ಆದ್ದರಿಂದ, ಪ್ರಾಸಾ -7 ಈತನನ್ನು ವಿಚಾರಣಾ ನ್ಯಾಯಾಲಯವು ಪ್ರತ್ಯಕ್ಷ ಸಾಕ್ಷಿಯನ್ನಾಗಿ ಪರಿಗಣಿಸಿರುವುದಿಲ್ಲ.ಪ್ರಾಸಾ -7 ಈತನನ್ನು ಪ್ರತ್ಯಕ್ಷ ಸಾಕ್ಷಿ ಎಂದು ವಿಚಾರಣಾ ನ್ಯಾಯಾಲಯವು ಪರಿಗಣಿಸದೆ ಇದ್ದಾಗ್ಯೂ, ಘಟನೆ ನಡೆದ ಸ್ಥಳ, ಗಾಯಗಳ ಸ್ವರೂಪ ಮತ್ತು ಮೃತ ಭೀಮರಾಯನಿಗುಂಟಾದ ಗಾಯಗಳಷ್ಟರಮಟ್ಟಿಗೆ ಆತನ ಸಾಕ್ಷ್ಯವು ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಮರ್ಥಿಸುತ್ತದೆ ಎಂಬ ಪರಾಯ ಆಧಾರದ ಮೇಲೆ ಅದರ ಕಾರಣಗಳನ್ನು ದಾಖಲಿಸಿದೆ.

18. ಶವಪರೀಕ್ಷೆ ನಡೆಸಿದ್ದಂಥ ಪ್ರಸಾ-12-ಡಾ.ಹೆಚ್.ಆರ್. ಕುಮಾರ್ ಅವರು, ಮೃತ ಭೀಮರಾಯನ ಶರೀರದ ಮೇಲೆ ಈ ಮುಂದಿನ ಗಾಯಗಳನ್ನು ಗಮನಿಸಿದ್ದಾರೆ:

1. ಕುತ್ತಿಗೆಯ ಮುಂಭಾಗದಲ್ಲಿ ಅದರ ಮೇಲೆ ಮರಣಪೂರ್ವ ಕತ್ತರಿಸಿದ ಗಾಯವಿದ್ದು, ಅದು, ಸ್ಟೆರೊಮಸ್ವಾಯ್ ಸ್ನಾಯುಗಳ ಬಲ ಪಾರ್ಶ್ವ ತುದಿಯಿಂದ ಎಡಭಾಗದವರೆಗೆ 10x3 ' ರಷ್ಟು ವಿಸ್ತರಿಸಿದೆ.ಕುತ್ತಿಗೆಯ ದೊಡ್ಡ ನಾಳ ಮತ್ತು ಶ್ವಾಸನಾಳಗಳು ಕತ್ತರಿಸಿ ಹೋಗಿವೆ.

ii.ಮೂಗಿನ ಮೂಲದ ಮೇಲೆ ಕತ್ತರಿಸಿ ಸಿಗಿದ ಗಾಯವಿದ್ದು, ಅದು 1x1 ಸೆಂ.ಮೀ. ಇದೆ.

iii.ಎಡ ಕಣ್ಣಿನ ಹುಬ್ಬಿನ ಮೇಲೆ ಕತ್ತರಿಸಿ ಸಿಗಿದ ಗಾಯವಿದೆ.

iv.ಎದೆಯ ಎಡ ಭಾಗದ ಮುಂಭಾಗದ ಮೇಲೆ 10 ಕುತ್ತಿಗೆಯ ಮಧ್ಯದ ಕೆಳಗೆ 4x2 ಸೆಂ.ಮಿ. ಕತ್ತರಿಸಿದ ಕಚ್ಚು ಗಾಯವಿದೆ.

V.ಬಲ ಮೊಳಕ್ಕೆ ಮೇಲೆ 2x1 ಸೆಂ.ಮೀ, ಗಾತ್ರದ ಕಚ್ಚು ಗಾಯ.

vi.ಹಿಂಬದಿಯಿಂದ ವೀಕ್ಷಿಸಿದಾಗ ಕರುಳಿನ ಸಿಂಬಿಯೊಂದಿಗೆ ಸೊಂಟದ ಎಡ ಭಾಗದಲ್ಲಿ 4x2 ' ಗಾತ್ರದ ಕತ್ತರಿಸಿದ ಗಾಯ.

vii.ಅಂಟೆರೋ ಮೀಡಿಯಲ್ ಆಸ್ಪೆಕ್ಸ್‌ನಲ್ಲಿ ಬಲ ತೊಡೆಯ ಮೇಲೆ 2xl ' ಗಾತ್ರದ ಕಚ್ಚು ಗಾಯ.

ನಿಶಾನೆ-ಪಿ 11-ಶವಪರೀಕ್ಷೆ ಪ್ರಮಾಣಪತ್ರದಲ್ಲಿನ ಗಾಯ ಸಂಖ್ಯೆ -1 ಇದು, ಕುತ್ತಿಗೆಯ ದೊಡ್ಡ ನಾಳ ಮತ್ತು ಶ್ವಾಸನಾಳವನ್ನು ಕತ್ತರಿಸಿ ಕಚ್ಚು ಗಾಯವಾಗಿದೆ ಎಂದು ಚ ತೋರಿಸುತ್ತದೆ.ಕುತ್ತಿಗೆಯ ಮುಖ್ಯ ರಚನೆಗಳಾದ ದೊಡ್ಡ ನಾಳ ಮತ್ತು ಶ್ವಾಸನಾಳಕ್ಕೆ ಆದ ಗಾಯದ ಪರಿಣಾಮವಾಗಿ ಉಂಟಾದ ರಕ್ತಸ್ರಾವ ಮತ್ತು ನಿತ್ರಾಣದಿಂದ ಮರಣ ಸಂಭವಿಸಿದೆ ಎಂದು ಪ್ರಾಸಾ-12-ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.ಎಮ್‌ಓ 1-ಕತ್ತಿ ಇದು 2 ಅಡಿ 6 ಇಂಚುಗಳಷ್ಟು ಉದ್ದವಿದ್ದು, ಅದರ ಅಂಚು 1/1/2 ಇಂಚುಗಳಷ್ಟು ಅಗಲವಿದೆ.ಎಮ್‌ಓ- 1-ಕತ್ತಿಯನ್ನು ಮತ್ತು

ಗಾಯಸಂಖ್ಯೆ: 1 ರ ಸ್ವರೂಪವನ್ನು ನೋಡಿ, ಪ್ರಾಸಾ-12-ವೈದ್ಯರು ಇವರು, " 1 ನಿಶಾನೆ-ಪಿ 11 ರಲ್ಲಿನ ಬಾಹ್ಯ ಗಾಯಸಂಖ್ಯೆ: 1 ಇದನ್ನು ಎಮ್- 1 ಅಥವಾ ಎಮ್ಓ -2 ಬಳಸಿ ಮಾಡಲು ಸಾಧ್ಯವಿಲ್ಲ ...... " ಎಂದು ಅಭಿಪ್ರಾಯಪಟ್ಟಿದ್ದಾರೆ.ಇದಲ್ಲದೆ, ಎಓ- 1-ಕತ್ತಿಯಿಂದ ಒಬ್ಬ ಮನುಷ್ಯನ ಗಂಟಲಿನ ಮೇಲೆ ಎರಡು ಅಥವಾ ಮೂರು ಬಾರಿ ಹಲ್ಲೆ ಮಾಡಿದರೆ, ಮರಣ ಸಂಭವಿಸುತ್ತದೆ ಎಂದು ಪ್ರಾಸಾ-12-ವೈದ್ಯರು ಹೇಳಿದ್ದಾರೆ.

19. ಪ್ರಾಸಾ-12-ವೈದ್ಯರ ಅಭಿಪ್ರಾಯಪೂರ್ವಕ ಸಾಕ್ಷ್ಯವು, ಎಮ್- 1 ಕತ್ತಿಯಿಂದ ಮೃತನಿಗೆ ಗಾಯಗಳು ಉಂಟಾಗಿದ್ದ ರೀತಿಗೆ ಸಂಬಂಧಿಸಿದಂತೆ ಪ್ರಾಸಾ 5 ಈಕೆಯ ಮೌಖಿಕ ಸಾಕ್ಷ್ಯವನ್ನು ಸಮರ್ಥಿಸಿರುವುದಿಲ್ಲವೆಂದು ಅಪೀಲುದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು ವಾದಿಸಿದ್ದಾರೆ.ಇದಲ್ಲದೆ, ತಮ್ಮ ಸಾಕ್ಷ್ಯದಲ್ಲಿ ಪ್ರಾಸಾ-12-ವೈದ್ಯರು, ನಿಶಾನೆ-ಪಿ 11 ರಲ್ಲಿ ನೀಡಿದ ಗಾಯಸಂಖ್ಯೆ: 1 ರ ವಿವರಣೆಯನ್ನು ಗಮನಿಸಿದಾಗ, ಎಮ್ಓ- 1-ಕತ್ತಿಯನ್ನು ಬಳಸಿ ಅದನ್ನು ಸತತವಾಗಿ ತಿರುಗಿಸುವ ಮೂಲಕ ಅದು ಉಂಟಾಗಿದೆ ಎಂದು ವಿಶ್ಲೇಷಿಸಲಾಗುವುದಿಲ್ಲ " ಎಂದು ಹೇಳಿದ್ದಾರೆ.ಪ್ರಾಸಾ-12-ವೈದ್ಯರನ್ನು, ಎಮ್ಓ- 1-ಕತ್ತಿಯನ್ನು ಬಳಸಿ ಗಾಯಸಂಖ್ಯೆ: 1 ಉಂಟಾಗಿರುವ ರೀತಿಯ ಬಗ್ಗೆ ಪದೇ ಪದೇ ಪಾಟಿ-ಸವಾಲು ಮಾಡಲಾಗಿದೆ ಹಾಗೂ ಪ್ರಾಸಾ -5 ಈಕೆಯ ಸಾಕ್ಷ್ಯವನ್ನು, ಪ್ರಾಸಾ-12-ವೈದ್ಯರಿಂದ ಹೊರ ಸೆಳೆದ ಉತ್ತರಗಳ ಆಧಾರದ ಮೇಲೆ ಚರ್ಚಿಸಬೇಕೆಂದು ಕೋರಲಾಗಿದೆ.

20. ತಜ್ಞನು ಸಂಗತಿಯ ಸಾಕ್ಷಿಯಲ್ಲ.ವೈದ್ಯರ ಅಭಿಪ್ರಾಯಪೂರ್ವಕ ಸಾಕ್ಷ್ಯವು ಪ್ರಮುಖವಾಗಿ ಅಭಿಪ್ರಾಯದ ಸಾಕ್ಷ್ಯವಾಗಿರುತ್ತದೆಯೇ ಹೊರತು ಸಂಗತಿಯಲ್ಲ.ಪ್ರಾಸಿಕ್ಯೂಷನ್ ಆರೋಪಿಸಿದ ರೀತಿಯಲ್ಲಿ ಗಾಯಗಳು ಉಂಟಾಗಿರಬಹುದು ಎಂಬ ಸಾಧ್ಯತೆ ಬಗ್ಗೆ ಸಾಕ್ಷ್ಯದ ಸಮರ್ಥನೀಯ ಅಂಶ ಮಾತ್ರವಾಗಿರುತ್ತದೆ.ಪ್ರಾಸಿಕ್ಯೂಷನ್ ನಿರೂಪಣೆಯ ಮೂಲಕ ಆರೋಪಿಸಲಾದ ರೀತಿಯಲ್ಲಿ ಗಾಯ ಉಂಟಾಗಿರುವಂಥ ಸಾಧ್ಯತೆಯನ್ನು ವೈದ್ಯಕೀಯ ಸಾಕ್ಷ್ಯವು ನಿರ್ಣಯಿಸದ ಹೊರತು, ಪ್ರತ್ಯಕ್ಷ ಸಾಕ್ಷಿಯ ಸಾಕ್ಷ್ಯವನ್ನು, ವೈದ್ಯಕೀಯ ಸಾಕ್ಷ್ಯದೊಂದಿಗೆ ಅದು ಅಸಾಂಗತ್ಯವಾಗಿರುವ ಕಾರಣದ ಮೇಲೆ ಸಂಶಯಿಸಲಾಗುವುದಿಲ್ಲ.ಒಂದೆಡೆ ಪ್ರಾಸಾ-12-ವೈದ್ಯರು, ಗಾಯಸಂಖ್ಯೆ: 1 ಇದು ಎಮ್- 1-ಕತ್ತಿಯಿಂದ ಉಂಟಾಗಿರಲಿಕ್ಕಿಲ್ಲವೆಂದು ಹೇಳಿರುವುರಾದರೂ, ಹೆಚ್ಚಿನ ಪ್ರಶ್ನೆಗಳನ್ನು ಕೇಳಿದ ನಂತರ, ಗಾಯಸಂಖ್ಯೆ: 1 ಇದು ಎಮ್ಓ -1 ರಿಂದ ಎರಡರಿಂದ ಮೂರು ಸಲ ಗಂಟಲಿನ ಮೇಲೆ ಹಲ್ಲೆ ಮಾಡುವ ಮೂಲಕವಾಗಲಿ ಅಥವಾ ಗಂಟಲಿನ ಗಾಯದ ಮೇಲೆ ಹೊಡೆದು ಆಯುಧವನ್ನು ತಿರುಗಿಸುವ ಮೂಲಕವಾಗಲಿ ಉಂಟಾಗುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.ಪ್ರಾಸಾ-12-ವೈದ್ಯರ ಸಾಕ್ಷ್ಯವನ್ನು ಪರಿಗಣಿಸಲಾಗಿ, ವೈದ್ಯಕೀಯ ಸಾಕ್ಷ್ಯ ಮತ್ತು ಮೌಖಿಕ ಸಾಕ್ಷ್ಯದ ನಡುವಿನ ಆರೋಪಿತ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ಮಾಡಿದ ವಾದದಲ್ಲಿ ಯಾವುದೇ ಗುಣಾರ್ಹತೆ ಇರುವುದಿಲ್ಲ.

21. ನಂತರ ಅಪೀಲುದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು, ಘಟನೆಯು ಬೆಳಿಗ್ಗೆ 09.00 ಗಂಟೆಗೆ ನಡೆದಿದ್ದು, ಪ್ರಥಮ ವರ್ತಮಾನ ವರದಿಯನ್ನು ಮಧ್ಯಾಹ್ನ 01.15 ಗಂಟೆಗೆ ದಾಖಲಿಸಲಾಗಿದೆ ಮತ್ತು ಸುಮಾರು ನಾಲ್ಕು ಗಂಟೆಗಳ ವಿಳಂಬದ ತರುವಾಯ ಮೊಕದ್ದಮೆಯನ್ನು ದಾಖಲಿಸಲಾಗಿದ್ದು, ಮ್ಯಾಜಿಸ್ಟ್ರೇಟ್ ಅವರು ಪ್ರಥಮ ವರ್ತಮಾನ ವರದಿಯನ್ನು ರಾತ್ರಿ 08.00 ಗಂಟೆಗೆ ಸ್ವೀಕರಿಸಿದ್ದಾರೆ ಎಂದು ವಾದಿಸಿದ್ದಾರೆ.ಆರೋಪಿಗಳ ಪರ ಮಾನ್ಯ ಹಿರಿಯ ನ್ಯಾಯವಾದಿಗಳು, ಪಕ್ಷಕಾರರ ನಡುವೆ ಹಗೆತನವಿದ್ದು, ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವಲ್ಲಿ ಆದ ವಿಳಂಬ ಹಾಗೂ ನ್ಯಾಯಾಲಯದಲ್ಲಿ ಪ್ರಥಮ ವರ್ತಮಾನ ವರದಿಯನ್ನು ಸ್ವೀಕರಿಸುವಲ್ಲಿ ಆದ ವಿಳಂಬವು, ಆರೋಪಿಗಳನ್ನು ಮೊಕದ್ದಮೆಯಲ್ಲಿ ತಪ್ಪಾಗಿ ಅರ್ಥೈಸಲಾಗಿದೆ ಎಂಬ ಗಂಭೀರ ಅನುಮಾನಗಳನ್ನು ಹುಟ್ಟುಹಾಕುತ್ತದೆ.ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವಲ್ಲಿ ಮತ್ತು ಅದನ್ನು ನ್ಯಾಯಾಲಯದಲ್ಲಿ ಸ್ವೀಕರಿಸುವಲ್ಲಿ ನಿಸ್ಸಂದೇಹವಾಗಿ ವಿಳಂಬವಾಗಿದೆ.ಪ್ರಥಮ ವರ್ತಮಾನ ವರದಿ ದಾಖಲಿಸುವಲ್ಲಿ ಆದ ವಿಳಂಬವು, ತಪ್ಪು ಇಂಗಿತಕ್ಕೆ ಕಾರಣವಾಗಿ ಅನುಮಾನ ಹುಟ್ಟು ಹಾಕುವ ಸ ಂ ದರ್ಭಗಳಿರಬಹುದು; ಆದರೆ, ವಿಳಂಬವನ್ನು ಮನವರಿಕೆಯಾಗುವಂತೆ ವಿವರಿಸಿದಾಗ, ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವಲ್ಲಿ ಅಥವಾ ಅದನ್ನು ನ್ಯಾಯಾಲಯದಲ್ಲಿ ಸ್ವೀಕರಿಸುವಲ್ಲಿ ಆದ ವಿಳಂಬವು, ಪ್ರಾಸಿಕ್ಯೂಷನ್ ಮೊಕದ್ದಮೆಯ ಮೇಲೆ ಪರಿಣಾಮ ಬೀರುವುದಿಲ್ಲ.ಪ್ರಾಸಾ -5 ಈಕೆಯ ಪತಿ ಮತ್ತು ಮೃತನ ತಂದೆ ಪ್ರಾಸಾ -6 ಈತನು ಮನೆಯಿಂದ ದೂರ ಇದ್ದನು ಮತ್ತು ಸಹಜವಾಗಿಯೇ, ಘಟನೆ ಕುರಿತು ದೂರನ್ನು ಸಲ್ಲಿಸಲು ಪ್ರಾಸಾ -5 ಮತ್ತು ಆಕೆಯ ಮಗ ಪ್ರಾಸಾ -7 ಇವರು ಸ್ವಲ್ಪ ಸಮಯ ತೆಗೆದುಕೊಂಡಿದ್ದಾರೆ.ತನ್ನ ಮಗನ ಮರಣವನ್ನು ನೋಡಿದ ನಂತರ ಪ್ರಾಸಾ -5 ಈಕೆಯ ಮನಸ್ಸಿನ ಮೇಲಾದ

ಪರಿಣಾಮವನ್ನು ಅಳೆಯಲಾಗುವುದಿಲ್ಲ.ತನ್ನ ಮಗನ ಮರಣದಿಂದ ದುಃಖಪೀಡಿತರಾಗಿದ್ದ ಪ್ರಸಾ -5 ಮತ್ತು ಪ್ರಾಸಾ -7 ಇವರಿಗೆ ದೂರನ್ನು ಸಲ್ಲಿಸಲು ಸಮಯ ತಗುಲಿರಬಹುದು.

22. ಅಪರಾಧಸಂಖ್ಯೆ: 44/2002 ರಲ್ಲಿನ ಪ್ರಥಮ ವರ್ತಮಾನ ವರದಿಯನ್ನು ಮಧ್ಯಾಹ್ನ 01.15 ಗಂಟೆಗೆ ನೋಂದಾಯಿಸಲಾಗಿದೆ ಮತ್ತು ಅದನ್ನು ಮ್ಯಾಜಿಸ್ಟ್ರೇಟರು ಸುಮಾರು ಆರು ಗಂಟೆಗಳ ನಂತರ ರಾತ್ರಿ 08.00 ಗಂಟೆಗೆ ಸ್ವೀಕರಿಸಿದ್ದಾರೆ. ಸಹಜವಾಗಿಯೇ ನ್ಯಾಯಾಲಯದಲ್ಲಿ ಪ್ರಥಮ ವರ್ತಮಾನ ವರದಿಯನ್ನು ಸ್ವೀಕರಿಸುವಲ್ಲಿ ಸ್ವಲ್ಪ ವಿಳಂಬವಾಗಿದೆ.ಸೈದಾಪುರ ಪೊಲೀಸ್ ಠಾಣೆಗೆ ನೇಮಕ ಮಾಡಲಾಗಿದ್ದ ಪ್ರಾಸಾ-10-ಪೇದೆ ಕಲ್ಯಾಣಮ್ಮ ಇವರು, ಸೈದಾಪುರ ಮತ್ತು ಯಾದಗೀರ್ ನಡುವೆ 40 ಕಿ.ಮೀ.ಗಳ ಅಂತರವಿದೆ ಎಂದು ನಂತರದಲ್ಲಿ ಹೇಳಿದ್ದಾರೆ.ಆ ಪ್ರಸಕ್ತ ಸಮಯದಲ್ಲಿ, ಸೈದಾಪುರದಿಂದ ಯಾದಗಿರಿಗೆ ಯಾವುದೇ ರೈಲು ಲಭ್ಯವಿರಲಿಲ್ಲವೆಂದು ಪ್ರಾಸಾ-10-ಪೇದೆ ಇವರು ಹೇಳಿದ್ದಾರೆ.ಇದಲ್ಲದೆ ಪ್ರಸಾ 10-ಪೇದೆ ಇವರು, ಆ ಪ್ರಸಕ್ತ ಸಮಯದಲ್ಲಿ ಯಾದಗಿರಿಯಿಂದ ಎಂಟು ಬಸ್ಸುಗಳು ಸಂಚರಿಸುತ್ತಿದ್ದಾಗ್ಯೂ, ಮುಂಚಿತವಾಗಿಯೇ ಯಾದಗಿರಿಯನ್ನು ತಲುಪಲು ಆ ಸಮಯದಲ್ಲಿ ಅವರಿಗೆ ಸಾಧ್ಯವಾಗುವಂತೆ ಯಾವುದೇ ಬಸ್ಸುಗಳಿರಲಿಲ್ಲವೆಂದು ಹೇಳಿದ್ದಾರೆ.ನಮ್ಮ ಅಭಿಪ್ರಾಯದಲ್ಲಿ, ನ್ಯಾಯಾಲಯದಲ್ಲಿ ಪ್ರಥಮ ವರ್ತಮಾನ ವರದಿಯನ್ನು ಸ್ವೀಕರಿಸುವಲ್ಲಿ ಯಾವುದೇ ರೀತಿಯ ಅತಿಯಾದ ವಿಳಂಬವಾಗಿರುವುದಿಲ್ಲ.ದೂರನ್ನು ದಾಖಲಿಸುವಲ್ಲಿ ಮತ್ತು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯದಲ್ಲಿ ಸ್ವೀಕರಿಸುವಲ್ಲಿ ಆದ ವಿಳಂಬ ಕುರಿತು ಸೂಕ್ತವಾಗಿ ವಿವರಿಸಲಾಗಿದ್ದು, ನ್ಯೂನ್ಯತೆ ಉಂಟಾಗಿಲ್ಲವೆಂಬುದು ವಿಚಾರಣಾ ನ್ಯಾಯಾಲಯದ ಮತ್ತು ಉಚ್ಚ ನ್ಯಾಯಾಲಯದ ನಿರ್ಣಯಗಳಾಗಿದ್ದು, ಇದಕ್ಕೆ ವಿಭಿನ್ನವಾದ ಚ ಅಭಿಪ್ರಾಯವನ್ನು ತೆಗೆದುಕೊಳ್ಳಲು ನಮಗೆ ಯಾವುದೇ ಕಾರಣ ಕಂಡುಬರುತ್ತಿಲ್ಲ.

23. ಈ ಹಿಂದೆ ಹೇಳಿರುವಂತೆ, ಆರೋಪಿಸಂಖ್ಯೆ: 1 ಈತನ ವಿಷಯ ಬಹಿರಂಗಪಡಿಸುವ ಹೇಳಿಕೆಯನ್ನಾಧರಿಸಿ, ಆರೋಪಿಸಂಖ್ಯೆ: 1 ಈತನ ಮನೆಯ ಹಿಂಭಾಗದ ಕೊಟ್ಟಿಗೆಯ ಅಟ್ಟದಲ್ಲಿನ ಮೇವು ಹುಲ್ಲಿನ ಮೆದೆಯಲ್ಲಿ ಬಚ್ಚಿಟ್ಟಿದ್ದ ಎಮ್ಒ- 1-ಕತ್ತಿಯನ್ನು, ಪಂಚ ಸಾಕ್ಷಿದಾರರಾದ ಪ್ರಾಸಾ- 8-ಚಂದ್ರಪ್ಪ ಮತ್ತು ಪ್ರಾಸಾ- 9-ಮಹಾದೇವಪ್ಪ ನೀಡಗೇರ ಇವರ ಎದುರಿನಲ್ಲಿ ನಿಶಾನೆ-ಪಿ9 ಪಂಚನಾಮೆಯ ಮೇರೆಗೆ ವಶಪಡಿಸಿಕೊಳ್ಳಲಾಗಿದೆ.ಸದರಿ ಪಂಚ ಸಾಕ್ಷಿದಾರರು ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಮರ್ಥಿಸದೆ ಪ್ರತಿಕೂಲ ಸಾಕ್ಷಿಗಳಾಗಿದ್ದಾರೆ.ನಿಶಾನೆ-ಪಿ- 7-ಸ್ಥಳ ಮಹಜರು ಮೇರೆಗೆ, ಘಟನೆ ನಡೆದ ಸ್ಥಳದಿಂದ ಎಮ್ಒ 2-ಕತ್ತಿ ಮತ್ತು ಎಮ್ಒ- 3-ಕೊಡಲಿಯ ಹಿಡಿ ಇವುಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಸಂಖ್ಯೆ: 1 ಈತನ ಸೂಚನೆಯ ಮೇರೆಗೆ ಎಮ್ಒ- 1-ಕತ್ತಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂಬ ಪ್ರಾಸಾ-17-ಪಿಎಸ್ಐನ ಸಾಕ್ಷ್ಯವು ಅನುಮಾನಾಸ್ಪದವಾಗಿದ್ದು, ಪ್ರಾಸಾ 8 ಮತ್ತು 9 ಇವರು ಪ್ರತಿಕೂಲ ಸಾಕ್ಷಿಗಳಾದಾಗ, ಎಮ್ಒ- 1-ಕತ್ತಿಯ ಆರೋಪಿತ ವಶಪಡಿಸಿಕೊಳ್ಳುವಿಕೆಗೆ ಯಾವುದೇ ಮಹತ್ವವನ್ನು ಅನ್ವಯಿಸಲಾಗದು ಎಂದು ಆರೋಪಿಯ ಪರ ಮಾನ್ಯ ಹಿರಿಯ ನ್ಯಾಯವಾದಿಗಳು ವಾದಿಸಿದ್ದಾರೆ.ಪಂಚ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಗಳಾದ ಕಾರಣ ಮಾತ್ರದಿಂದ, ಆಯುಧವನ್ನು ವಶಪಡಿಸಿಕೊಂಡಿರುವುದು ನಿರರ್ಥಕಗೊಳ್ಳುತ್ತದೆ ಎಂಬ ವಾದದಲ್ಲಿ ಯಾವುದೇ ಗುಣಾರ್ಹತೆ ಇಲ್ಲ. ಪಂಚ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಗಳಾದಗಲೂ ಸಹಿತ ವಶಪಡಿಸಿಕೊಂಡಿರುವುದನ್ನು ಸಾಬೀತುಪಡಿಸಲು ತನಿಖಾಧಿಕಾರಿಯ ಸಾಕ್ಷ್ಯವನ್ನು ಅವಲಂಬಿಸಬಹುದು ಎಂಬುದು ಸಂಪೂರ್ಣವಾಗಿ ಸುಸ್ಥಾಪಿತ ವಿಷಯವಾಗಿದೆ.ರಮೇಶ್ಭಾಯಿ ಮೋಹನ್ಭಾಯಿ ಕೋಅ -ವಿರುದ್ಧ-ಗುಜರಾತ್ ರಾಜ್ಯ ಮತ್ತು ಇತರರು, (2011) 11 ಎಸ್ಸಿ 111 ಈ ಮೊಕದ್ದಮೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದೆ:

"33. ಮದನ್ ಸಿಂಗ್ -ವಿರುದ್ಧ-ರಾಜಸ್ಥಾನ ರಾಜ್ಯ (1978) 4 ಎಸ್ಸಿಸಿ 435 ಮೊಕದ್ದಮೆಯಲ್ಲಿ, ಮುದ್ದೆಮಾಲನ್ನು ವಶಪಡಿಸಿಕೊಳ್ಳುವ ತನಿಖಾಧಿಕಾರಿಯ ಸಾಕ್ಷ್ಯವು ಮನವರಿಕೆಯಾಗುವಂತಿದ್ದಲ್ಲಿ, ಪ್ರಾಸಿಕ್ಯೂಷನ್ ನಿರೂಪಣೆಯನ್ನು ಅಪ್ಪಿ ಸಾಕ್ಷಿದಾರರು ಸಮರ್ಥಿಸಿಲ್ಲವೆಂಬ ಕಾರಣದ ಮೇಲೆ ವಶಪಡಿಸಿಕೊಂಡಿದ್ದಕ್ಕೆ ಸಂಬಂಧಿಸಿದ ಸಾಕ್ಷ್ಯವನ್ನು ನಿರಾಕರಿಸಬೇಕಾದ ಅಗತ್ಯವಿಲ್ಅ.ಇದೇ ಅಭಿಪ್ರಾಯವನ್ನು ಮೊಹಮ್ಮದ್ ಅಸ್ಲಮ್ -ವಿರುದ್ಧ-ಮಹಾರಾಷ್ಟ್ರ ರಾಜ್ಯ (2001) 9 ಎಸ್ಸಿಸಿ 362 ರಲ್ಲಿ ವ್ಯಕ್ತಪಡಿಸಲಾಗಿತ್ತು.

34. ಅಂತೇರ್ ಸಿಂಗ್ -ವಿರುದ್ಧ-ರಾಜಸ್ಥಾನ ರಾಜ್ಯ, (2004) 10 ಎಸ್ಸಿ 657 ಮೊಕದ್ದಮೆಯಲ್ಲಿ, ಮು ಂ ದುವರಿದು ಮು ಂ ದಿನ ಂ ತೆ ನಿರ್ಣಯಿಸಲಾಗಿದೆ:(ಎಸ್ಸಿ ಪುಟ ಸಂಖ್ಯೆ 661 9, ಪುಟ 10)

"10. ಅಪರಾಧಿಕ ಮೊಕದ್ದಮೆಗಳಲ್ಲಿ ಸಾಮಾನ್ಯವಾಗಿ ಸಂಭವಿಸುವಂತೆ ಪಂಚ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಗಳಾಗಿ ಬದಲಾದರೂ, ವಶಪಡಿಸಿಕೊಳ್ಳುವುದನ್ನು ಕಾವ್ಯಗತಗೊಳಿಸಿದ ವ್ಯಕ್ತಿಯ ಸಾಕ್ಷ್ಯವು ನಿರರ್ಥಕವಾಗುವುದಿಲ್ಲ. "

34. ಸಾಕ್ಷ್ಯವು ತನಿಖಾಧಿಕಾರಿಯ ಪುರಾವೆಯನ್ನು ಆಧರಿಸಿದ್ದ ಮಾತ್ರದಿಂದಲೇ, ಪಂಚ ಸಾಕ್ಷಿದಾರರು ಪ್ರತಿವಾದಿ ಸಾಕ್ಷಿಗಳಾಗಿ ಬದಲಾಗಿರುವರು ಎಂಬ ಕಾರಣವು ಸಾಕ್ಷ್ಯದ ನಿರಾಕರಣೆಗೆ ಕಾರಣವಾಗುವುದಿಲ್ಲವೆಂದು ಈ ನ್ಯಾಯಾಲಯವು ಬಹಳಷ್ಟು ಮೊಕದ್ದಮೆಗಳಲ್ಲಿ ನಿರ್ಣಯಿಸಿದೆ.ಪ್ರಸ್ತುತ ಮೊಕದ್ದಮೆಯಲ್ಲಿ, ತನಿಖಾಧಿಕಾರಿಯ ಪುರಾವೆಯು ಯಾವುದೇ ನ್ಯೂನ್ಯತೆ ಅಥವಾ ಸಂಶಯಕ್ಕೆ ಗುರಿಯಾಗಿದೆ ಎಂಬುದು ಪ್ರತಿವಾದಿ ಸುಳ್ಳೆಂದಾಗುವುದಿಲ್ಲ.(ನೋಡಿ ಮದನ್ ಸಿಂಗ್ ಮೊಕದ್ದಮೆ, ಕೃಷ್ಣ ಗೋಪಾಲ ಮೊಕದ್ದಮೆ ಮತ್ತು ಅಂತೇರ್ ಸಿಂಗ್ ಮೊಕದ್ದಮೆ

ಆರೋಪಿಸಂಖ್ಯೆ: 1 ಈತನ ಸೂಚನೆ ಮೇರೆಗೆ, ಎಮ್- 1-ಕತ್ತಿ ಮತ್ತು ಎಮ್ಓ- 2-ಕತ್ತಿ ಹಾಗೂ ಎಮ್ಓ- 3-ಕೊಡಲಿಯ ಹಿಡಿ ಇವುಗಳನ್ನು ಘಟನೆ ನಡೆದ ಸ್ಥಳದಿಂದ ವಶಪಡಿಸಿಕೊಳ್ಳಲಾಗಿರುವ ಬಗ್ಗೆ, ಪ್ರಾಸಾ-17-ಪಿಎಸ್ಐ ಇವರು ಸ್ಪಷ್ಟವಾಗಿ ಹೇಳಿದ್ದಾರೆ ಮತ್ತು ಪಂಚ ಸಾಕ್ಷಿದಾರರು ಪ್ರತಿವಾದಿ ಸಾಕ್ಷಿಗಳಾಗಿ ಬದಲಾದ ಕಾರಣ ಮಾತ್ರದಿಂದ ಅವರ ಸಾಕ್ಷ್ಯವನ್ನು ನಿರಾಕರಿಸಲಾಗುವುದಿಲ್ಲ.

24. ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಮೇರೆಗೆ ದಾಖಲಿಸಲಾದ ಮೊಕದ್ದಮೆಯಲ್ಲಿ, ಪೊಲೀಸ್ ಸರ್ಕಲ್ ಇನ್ಸ್ಪೆಕ್ಟರ್‌ರವರು ಮಾತ್ರ ತನಿಖೆ ನಡೆಸಲು ಅಧಿಕಾರ ಹೊಂದಿದ್ದು, ಪ್ರಸಾ-17-ಪಿಎಸ್ಐ ಇವರು ತನಿಖೆ ನಡೆಸುವ ಯಾವುದೇ ಅಧಿಕಾರ ಹೊಂದಿರುವುದಿಲ್ಲ ಮತ್ತು ತನಿಖೆಯನ್ನು ನಡೆಸಲು ಅಧಿಕಾರ ಹೊಂದಿರದೆ ಇದ್ದಂಥ ಪ್ರಸಾ-17-ಪಿಎಸ್ಐ ಇವರು ತನಿಖೆ ಮಾಡಿರುವುದರಿಂದ ಪ್ರಾಸಿಕ್ಯೂಷನ್ ಮೊಕದ್ದಮೆಯು ನಿರರ್ಥಕವಾಗಿದೆ ಎಂದು ಅಪೀಲುದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು ವಾದಿಸಿದ್ದಾರೆ.ಸರ್ಕಲ್ ಇನ್ಸ್ಪೆಕ್ಟರ್ ಅವರು ಪೊಲೀಸ್ ಠಾಣೆಯಲ್ಲಿ ಲಭ್ಯರಿಲ್ಲದಿದ್ದರೆ ಅಥವಾ ಬೇರೊಂದು ಕರ್ತವ್ಯದಲ್ಲಿದ್ದರೆ, ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಪಿಎಸ್ಐ ಅವರು ಪ್ರಾರಂಭಿಕ ತನಿಖೆಯನ್ನು ಮುಂದುವರಿಸಲು ಅಧಿಕಾರ ಹೊಂದಿದ್ದರು.ಪ್ರಾಸಾ-17-ಪಿಎಸ್ಐ ಅವರು ತಮ್ಮ ಸಾಕ್ಷ್ಯದಲ್ಲಿ, ಸರ್ಕಲ್ ಇನ್ಸ್ಪೆಕ್ಟರ್ ಅವರ ಅನುಪಸ್ಥಿತಿಯಲ್ಲಿ, ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿದ ಪ್ರಕರಣವನ್ನು ಒಳಗೊಂಡು, ದಾಖಲಿಸಲಾದ ಪ್ರಕರಣಗಳನ್ನು ತನಿಖೆ ಮಾಡುವ ಅಧಿಕಾರವನ್ನು ತಾನು ಹೊಂದಿರುವುದಾಗಿ ಸ್ಪಷ್ಟವಾಗಿ ಹೇಳಿದ್ದಾರೆ.ಒಂದು ಗಂಭೀರ ಅಪರಾಧವನ್ನು ದಾಖಲಿಸಿದಾಗ, ಸರ್ಕಲ್ ಇನ್ಸ್ಪೆಕ್ಟರ್ ಅವರ ಬರುವಿಕೆಗೆ ಅಥವಾ ತನಿಖೆಯನ್ನು ಪ್ರಾರಂಭಿಸಲು ಸೂಚನೆಗಾಗಿ ಕಾಯುತ್ತಾ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಪಿಎಸ್ಐ ಕೂರಲಾಗುವುದಿಲ್ಲ.

25. ಪ್ರಾಸಾ -5 ಮತ್ತು ಪ್ರಸಾ -7 ಇವರ ಸಾಕ್ಷ್ಯದಿಂದ, ಪ್ರಾಸಿಕ್ಯೂಷನ್ ಆರೋಪಿಸಂಖ್ಯೆ: 1 ಮತ್ತು 2 ಇವರ ಅತಿರೇಕದ ಕೃತ್ಯವನ್ನು ಸಾಬೀತುಪಡಿಸಿದ್ದು, O ಪ್ರಾಸಾ-12-ಡಾ.ಹೆಚ್.ಆರ್. ಕುಮಾರ್ ಇವರು ಹೇಳಿದಂತೆ ತತ್ಸಂಬಂಧಿ ಗಾಯಗಳಿಂದ ಇದು ಸಮರ್ಥನೆಗೊಂಡಿದೆ.ನಂತರ, ಮೃತನ ಬೆನ್ನಿನ ಮೇಲೆ ಕೊಡಲಿಯ ಮರದ ಹಿಡಿಯಿಂದ (ಎಮ್ಓ -3) ಮೃತನ ಮೇಲೆ ಹಲ್ಲೆ ಮಾಡಿದನೆಂದು ಹೇಳಲಾದ, ಆರೋಪಿಸಂಖ್ಯೆ: 4 ಈತನು ಬಲಿಚಕ್ರದಲ್ಲಿ ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿರುವನು ಎಂಬುದಾಗಿ ಹೇಳಲಾಗಿದೆ.ಶವ ಪರೀಕ್ಷೆ ಪ್ರಮಾಣಪತ್ರದ (ನಿಶಾನೆ-ಪಿ 11) ಅವಲೋಕನದಿಂದ, ಆರೋಪಿಸಂಖ್ಯೆ: 4 ಈತನ ಆರೋಪಿತ ಅತಿರೇಕದ ಕೃತ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಗಾಯದ ಉಲ್ಲೇಖವಿಲ್ಲ.ಪ್ರಥಮ ವರ್ತಮಾನ ವರದಿಯಿಂದ ಕಂಡುಬಂದಂತೆ, ಹಲ್ಲೆ ಮಾಡುವ ಸಮಯದಲ್ಲಿ, ಆರೋಪಿಗಳು " ಈ ಸೂಳೆಮಗನು ನಮ್ಮ ತಾಯಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದಾನೆ " ಎಂದು ಹೇಳಿದನು ಎಂದು ಪ್ರಾಸಾ -5 ದೂರಿನಲ್ಲಿ ಹೇಳಿದ್ದಾಳೆ.ಮೊದಲ ನೋಟದಲ್ಲೇ ಪ್ರಥಮ ವರ್ತಮಾನ ವರದಿಯಲ್ಲಿ ಹೇಳಲಾದ ಮೇಲಿನ ಪದಗಳು, ಆರೋಪಿಸಂಖ್ಯೆ: 1 ಮತ್ತು 2 ಮತ್ತು ಮೃತನ ಮೇಲೆ ಹಲ್ಲೆ ಮಾಡಿ ತಲೆ ಮರೆಸಿಕೊಂಡ ಆರೋಪಿಸಂಖ್ಯೆ: 3 ಇವರು ಇದ್ದರು ಎಂಬುದು ತಿಳಿದುಬರುತ್ತದೆ.ಆರೋಪಿಸಂಖ್ಯೆ: 4 ಈತನು ಇದ್ದನೆಂಬುದರ ಸಂಬಂಧದಲ್ಲಿ ಸಂದರ್ಭವು ಗಂಭೀರ ಸಂಶಯಗಳನ್ನು ಹುಟ್ಟುಹಾಕುತ್ತಿದ್ದು, ಸಂಶಯದ ಲಾಭವನ್ನು ಆರೋಪಿಸಂಖ್ಯೆ: 4 ಈತನಿಗೆ ನೀಡಬೇಕಾಗುತ್ತದೆ ಹಾಗೂ ಆರೋಪಿಸಂಖ್ಯೆ: 4 ಈತನ ಅಪರಾಧ ನಿರ್ಣಯವನ್ನು ಸಮರ್ಥಿಸಲಾಗುವುದಿಲ್ಲ.ಆರೋಪಿಸಂಖ್ಯೆ: 1-ಮಲ್ಲಿಕಾರ್ಜುನ ಮತ್ತು ಆರೋಪಿಸಂಖ್ಯೆ: 2-ರವಿ ಇವರ

ಅಪರಾಧ ನಿರ್ಣಯವು, ಸಾಕ್ಷ್ಯದ ಸೂಕ್ತ ಪರಾಮರ್ಶನೆಯನ್ನಾಧರಿಸಿದೆ ಮತ್ತು ಕಾರಣ ನೀಡುವಿಕೆಯು ಸಮತೂಕದಿಂದ ಕೂಡಿದೆ ಹಾಗೂ ಅವರ ಅಪರಾಧ ನಿರ್ಣಯದಲ್ಲಿ ಹಸ್ತಕ್ಷೇಪದ ಅಗತ್ಯವನ್ನುಂಟು ಮಾಡುವ ಯಾವುದೇ ಕಾರಣ ನಮಗೆ ಕಂಡುಬಂದಿಲ್ಲ.

26. ಈ ಕಾರಣದಿಂದ, ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾಗುವ ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಹಾಗೂ ಭಾರತ ದಂಡ ಸಂಹಿತೆಯ 24 ನೇ ಪ್ರಕರಣದೊಂದಿಗೆ ಓದಲಾಗುವ ಭಾರತ ದಂಡ ಸಂಹಿತೆಯ 448 ನೇ ಪ್ರಕರಣದ ಮೇರೆಗೆ ಆರೋಪಿಸಂಖ್ಯೆ: 1-ಮಲ್ಲಿಕಾರ್ಜುನ ಮತ್ತು ಆರೋಪಿಸಂಖ್ಯೆ: 2-ರವಿ ಇವರ ಅಪರಾಧ ನಿರ್ಣಯವಾಗುತ್ತದೆ ಹಾಗೂ ಅವರಿಗೆ ವಿಧಿಸಲಾದ ಸೆರೆವಾಸದ ಶಿಕ್ಷೆಯನ್ನು ಸ್ಥಿರೀಕರಿಸಲಾಗಿದೆ ಹಾಗೂ ಸಹ-ಆರೋಪಿಸಂಖ್ಯೆ: 1 ಮತ್ತು 2 ಇವರ ಅಪೀಲನ್ನು ವಜಾಗೊಳಿಸಲಾಗಿದೆ.ಆರೋಪಿಸಂಖ್ಯೆ: 4 ಈತನ ಅಪರಾಧ ನಿರ್ಣಯವನ್ನು ತಳ್ಳಿಹಾಕಲಾಗಿದೆ ಮತ್ತು ಆತನ ಮೇಲೆ ಹೊರಿಸಲಾದ ಎಲ್ಲಾ ಆರೋಪಗಳಿಂದ ಆತನನ್ನು ಖುಲಾಸೆಗೊಳಿಸಲಾಗಿದೆ.ತದನುಸಾರವಾಗಿ ಈ ಅಪೀಲಿಗೆ ಭಾಗಶಃ ಅನುಮತಿ ನೀಡಲಾಗಿದೆ.